01-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026-27 ರ ಎಸ್. ಎಸ್. ಎಲ್. ಸಿ. ಮಾದರಿ ಪ್ರಶ್ನೆಪತ್ರಿಕೆ 1 ಕ್ಕೆ ಮಾದರಿ ಉತ್ತರಗಳು

2026-27 SSLC MODEL QUESTION PAPRER 1 MODEL ANSWERS

ವಿಷಯ ಸಂಕೇತ : **01-K** **Subject Code : 01-K**

ವಿಷಯ : ಪ್ರಥಮ ಭಾಷೆ — **ಕನ್ನಡ**

Subject : First Language — KANNADA

ಸಮಯ : 3 ಗಂಟೆ 15 ನಿಮಿಷಗಳು] [Time : 3 Hours 15 Minutes

ಗರಿಷ್ಠ ಅಂಕಗಳು : 100] [Max. Marks : 100

[Turn over

I. ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : **6 X 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವಸ್ವರಗಳ ಸಂಖ್ಯೆ

(ಎ) ೦೫ (ಬಿ) ೦೬

(ಸಿ) ೦೭ (ಡಿ) ೦೯

ಉತ್ತರ : (ಬಿ) ೦೬

2. 'ಮಹರ್ಷಿ' ಪದವು ಈ ಸಂಧಿಗೆ ಸೇರಿದೆ

(ಎ) ಯಣ್ (ಬಿ) ವೃದ್ಧಿ

(ಸಿ) ಗುಣ (ಡಿ) ಸವರ್ಣದೀರ್ಘ

ಉತ್ತರ : (ಸಿ) ಗುಣ

3. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು

(ಎ) ಅಲ್ಪವಿರಾಮ (ಬಿ) ಅರ್ಧವಿರಾಮ

(ಸಿ) ಆವರಣ (ಡಿ) ಉದ್ಧರಣ

ಉತ್ತರ : (ಡಿ) ಉದ್ಧರಣ

4. 'ತಿಂದಾನು' ಪದವು ಈ ಕ್ರಿಯಾಪದಕ್ಕೆ ಸೇರಿದೆ

(ಎ) ಸಂಭಾವನಾರ್ಥಕ (ಬಿ) ವಿಧ್ಯರ್ಥಕ

(ಸಿ) ಸಾಮಾನ್ಯಾರ್ಥಕ (ಡಿ) ನಿಷೇಧಾರ್ಥಕ

ಉತ್ತರ : (ಎ) ಸಂಭಾವನಾರ್ಥಕ

5. ಪ್ರಥಮಾ ವಿಭಕ್ತಿಯ ಕಾರಕಾರ್ಥವಿದು

(ಎ) ಕರ್ಮಾರ್ಥ (ಬಿ) ಕರಣಾರ್ಥ

(ಸಿ) ಕರ್ತ್ರಾರ್ಥ (ಡಿ) ಸಂಪ್ರದಾನ

ಉತ್ತರ : (ಸಿ) ಕರ್ತ್ರಾರ್ಥ

6. 'ಸೊಲ್ಗೇಳಿ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ಕ್ರಿಯಾ (ಬಿ) ತತ್ಪುರುಷ

(ಸಿ) ಕರ್ಮಧಾರಯ (ಡಿ) ಗಮಕ

ಉತ್ತರ : (ಎ) ಕ್ರಿಯಾ

II. ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) : **4 X 1 = 4**

7. ಪಾದುಕಾ : ಹಾವುಗೆ : : ಪ್ರಸಾದ : ..... .

ಉತ್ತರ : ಹಸಾದ

8. ಪರ್ವತ : ರೂಢನಾಮ : : ಪಂಡಿತ : ..... .

ಉತ್ತರ : ಅನ್ವರ್ಥನಾಮ

9. ಸೊಗಸಾಗಿ : ಸಾಮಾನ್ಯಾರ್ಥಕಾವ್ಯಯ : : ಸಾಕು : ..... .

ಉತ್ತರ : ಕ್ರಿಯಾರ್ಥಕಾವ್ಯಯ

10. ಓಡುವ : ಕೃದಂತನಾಮ : : ಅಂಜಿಕೆ : ..... .

ಉತ್ತರ : ಕೃದಂತ ಭಾವನಾಮ

III. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) : **7 X 1 = 7**

11. ಮನುಷ್ಯನಿಗೆ ಲೆಕ್ಕವಿಡುವ ಆವಶ್ಯಕತೆ ಯಾವಾಗ ಉಂಟಾಯಿತು?

ಉತ್ತರ : ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳನ್ನು ತಳೆಯುವುದಕ್ಕೆ ಮೊದಲು ಮಾಡಿದಂದಿನಿಂದ ಮನುಷ್ಯನಿಗೆ ಲೆಕ್ಕವಿಡುವ ಆವಶ್ಯಕತೆ ಉಂಟಾಯಿತು.

12. ಹುಲಿಗೆ ಪರಮಾನಂದವಾಗಲು ಕಾರಣವೇನು?

ಉತ್ತರ : ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.

13. ಪ್ರವಾಸವನ್ನು ಕುರಿತು ಬೇಕನ್ನನು ಹೇಳಿದ ಮಾತು ಯಾವುದು?

ಉತ್ತರ : ಬೇಕನ್ನನು ಪ್ರವಾಸವನ್ನು ಕುರಿತು "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ" ಎಂದು ಹೇಳಿರುವನು.

14. ರಾಜಗೃಹ ಪಟ್ಟಣದ ಅರಸ ಯಾರು?

ಉತ್ತರ : ರಾಜಗೃಹ ಪಟ್ಟಣದ ಅರಸ ಸುಬಲ.

15. ಹಲಗಲಿಯ ಗುರುತು ಉಳಿಯದಂತಾದದು ಏಕೆ?

ಉತ್ತರ : ಹಲಗಲಿಯ ಮೇಲೆ ಬ್ರಿಟಿಷ್ ಸರ್ಕಾರದ ದಂಡು ದಾಳಿ ಮಾಡಿ, ಬೆಂಕಿ ಹಚ್ಚಿದ್ದರಿಂದ ಹಲಗಲಿಯ ಗುರುತು ಉಳಿಯದಂತಾಯಿತು.

16. ಪರಶುರಾಮರು ದ್ರೋಣರಿಗೆ ಯಾವುದರಲ್ಲಿ ಅರ್ಘ್ಯವನ್ನು ನೀಡಿದರು?

ಉತ್ತರ : ಪರಶುರಾಮನು ದ್ರೋಣನಿಗೆ ಮಣ್ಣಿನ ಮಡಿಕೆಯಲ್ಲಿ ಅರ್ಘ್ಯವನ್ನು ನೀಡಿದರು.

17. ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ?

ಉತ್ತರ : ಪುಟ್ಟ ಪೋರಿಯ ಅಮ್ಮ ಗುಡಿಸಲಿನಲ್ಲಿ ಗೂರುತ್ತಾ ಮಲಗಿದ್ದಾಳೆ.

IV. ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

10 X 2 = 20

18. ಕನ್ನಡ ಭಾಷೆ ಹದಗೊಂಡ ಬಗೆಯನ್ನು ತಿಳಿಸಿ.

ಉತ್ತರ : ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರ ವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಮುಂದೆ ಬಸವೇಶ್ವರ, ಅಲ್ಲಮಪ್ರಭು, ಚಾಮರಸ, ಕುಮಾರವ್ಯಾಸ, ಪುರಂದರದಾಸ, ಕನಕದಾಸರು ಸುಲಭ ಮಾರ್ಗವನ್ನು ತುಳಿದರು. ತಮ್ಮ ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಹೀಗೆ ಕನ್ನಡ ಭಾಷೆ ಹದಗೊಂಡಿತು.

19. ನೆಹರು ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಹೇಳಿದ ಮಾತುಗಳಾವುವು?

ಉತ್ತರ : ನೆಹರು ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ವಿಶ್ವೇಶ್ವರಯ್ಯ ಅವರನ್ನು ಕುರಿತು ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರು ಎಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ ಎಂದು ಹೇಳಿದ್ದಾರೆ.

20. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?

ಉತ್ತರ : ಲಂಡನ್ ನಗರದ 'ವೂಲವರ್ಥ' ಎಂಬ ಸ್ಟೇಷನರಿ ಅಂಗಡಿ ಪ್ರಾಚೀನ ಮಹಾಕಾವ್ಯದಂತೆ ಮಹಾಕೋಶವಾಗಿದೆ. ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡುಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೊಟೋ, ಅಡವಿಯ ಹೂವು, ಯುದ್ಧ ಸಾಮಗ್ರಿ ಹೀಗೆ ಎಲ್ಲ ತರದ ಸಾಮಾನುಗಳು ಇಲ್ಲಿ ದೊರೆಯುತ್ತವೆ.

21. ರಾಜಸಭೆಯಲ್ಲಿ ಅಗ್ನಿಭೂತಿ ವಾಯುಭೂತಿಯರನ್ನು ಮೂರ್ಖರೆಂದು ತೀರ್ಮಾನಿಸಲು ಕಾರಣವೇನು?

ಉತ್ತರ : ಅಗ್ನಿಭೂತಿ ವಾಯುಭೂತಿಯರು ತಂದೆತಾಯಿಯರ ಮಾತಿಗೆ ಕಿವಿಗೊಡದೆ, ಯಾವ ವಿದ್ಯೆಯನ್ನು ಕಲಿಯದೆ, ತಂದೆ ಕೂಡಿಟ್ಟ ಹಣವನ್ನು ಪೋಲುಮಾಡುತ್ತ ಸಪ್ತವ್ಯಸನಗಳಿಗೆ ತುತ್ತಾಗಿದ್ದರು. ಸೋಮಶರ್ಮನ ಮರಣದ ನಂತರ ರಾಜನು ಮಕ್ಕಳನ್ನು ಅರಮನೆಗೆ ಕರೆಸಿಕೊಂಡು ಸತ್ಕರಿಸಿ ಸಂತಾಪವನ್ನು ಸೂಚಿಸಿ ಕಳುಹಿಸಿದನು. ಕೆಲವು ದಿವಸಗಳು ಕಳೆದ ಮೇಲೆ ಮತ್ತೆ ಅವರಿಬ್ಬರನ್ನೂ ರಾಜನು ಅರಮನೆಗೆ ಕರೆಸಿಕೊಂಡು "ನೀವು ಯಾವ ವಿದ್ಯೆಗಳನ್ನು ಬಲ್ಲಿರಿ?" ಎಂದು ವಿಚಾರಿಸಿದನು. ಅವರು ತಲೆತಗ್ಗಿಸಿ ಉತ್ತರ ಕೊಡಲಾರದೆ ಕಣ್ಣೀರು ಸುರಿಸುತ್ತ ನಾಚಿಕೆಯಿಂದ ಕಾಲಿನ ಬೆರಳುಗಳನ್ನು ನೆಲದ ಮೇಲೆ ಗೀರತೊಡಗಿದರು. ರಾಜಸಭೆಯಲ್ಲಿದ್ದವರೆಲ್ಲ "ಇವರು ಕಡುಮೂರ್ಖರು, ವಿದ್ಯೆಯನ್ನು ಅರಿಯರು, ಸಪ್ತವ್ಯಸನದಲ್ಲಿ ಮುಳುಗಿರುವರು" ಎಂದರು. ಇದನ್ನು ಕೇಳಿದ ರಾಜನು ಅವರನ್ನು ಮೂರ್ಖರೆಂದು ತೀರ್ಮಾನಿಸಿ ಅಲ್ಲಿಂದ ಓಡಿಸಿದನು.

22. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?

ಉತ್ತರ : ಕಾಲವೆಂಬ ಹಕ್ಕಿಯು ಆಕಾಶ, ಮೋಡ, ಭೂಮಂಡಲಗಳ ಎಲ್ಲಾ ಬಣ್ಣಗಳನ್ನು ಸಮನಾಗಿ ಆವರಿಸಿಕೊಂಡಿದೆ. ಆಕಾಶದಲ್ಲಿರುವ ಮುಗಿಲಿಗೆ ರೆಕ್ಕೆಗಳೊಡೆದವೋ ಎಂಬಂತೆ, ಆಕಾಶದಲ್ಲಿ ಮಿನುಗುತ್ತಿರುವ ಚಿಕ್ಕೆಗಳ ಮಾಲೆಯನ್ನು ಕೊರಳಿಗೆ ಸಿಕ್ಕಿಸಿಕೊಂಡು, ಅಕಾಶದಲ್ಲಿ ಬೆಳಗುತ್ತಿರುವ ಸೂರ್ಯಚಂದ್ರರನ್ನು ಕಣ್ಣುಗಳಾಗಿ ಮಾಡಿಕೊಂಡು ಅನಂತದೆಡೆಗೆ ಹಾರಿ ಹೋಗುತ್ತಿದೆ ಎಂದು ಕವಿ ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿದ್ದಾರೆ.

23. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?

ಉತ್ತರ : ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಹಲಗಲಿಗೆ ಬಂದಿತು. ಬ್ರಿಟಿಷರ ದಂಡಿನ ಸಿಪಾಯಿಗಳು ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದರು. ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಬ್ರಿಟಿಷ್ ಸಿಪಾಯಿಗಳ ಗುಂಡಿಗೆ ಹೆದರಿ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿ ತಲೆಮರೆಸಿಕೊಂಡರು.

24. ಭಗತ್‌ಸಿಂಗ್ ಹೇಗೆ ಅಮರನಾದನು?

ಉತ್ತರ : ಭಗತ್‌ಸಿಂಗ್ ಕ್ರಾಂತಿಕಾರಿಗಳ ಸಹಕಾರದಿಂದ ಮಾತೃಭೂಮಿಯನ್ನು ಗುಲಾಮಗಿರಿಯ ಸಂಕೋಲೆಯಿಂದ ಬಿಡಿಸಲು ಸ್ವಾತಂತ್ರ್ಯ ಹೋರಾಟದ ಪಥದಲ್ಲಿ ಮುನ್ನಡೆದನು. 'ಇಂಕ್ವಿಲಾಬ್ ಜಿಂದಾಬಾದ್' ಎಂಬ ಘೋಷಣೆಯೊಂದಿಗೆ ಸ್ವಾತಂತ್ರ್ಯಕ್ಕೋಸ್ಕರ ತನ್ನ ಜೀವವನ್ನೇ ಅರ್ಪಿಸಿ ಮರಣ ದಂಡನೆಗೆ ಈಡಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಗುರಿಯನ್ನು ತೋರಿಸಿಕೊಟ್ಟು ಪ್ರಾಣಾರ್ಪಣೆ ಮಾಡಿದ ಭಗತ್‌ಸಿಂಗ್ ತನ್ನ ತ್ಯಾಗ ಬಲಿದಾನದಿಂದ ಅಮರನಾದನು.

25. ಬಾಳಿನಲ್ಲಿ ತೃಪ್ತಿ ದೊರೆಯಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ?

ಉತ್ತರ : ನಮ್ಮ ದೇಶದ ಮತ್ತು ಇಡೀ ಜಗತ್ತಿನ ಕಲ್ಯಾಣ ನಮ್ಮ ಮೇಲೆ ನಿಂತಿದೆ ಎಂದು ಭಾವಿಸಿಕೊಂಡು ನಾವು ಕಾರ್ಯೋನ್ಮುಖರಾಗಬೇಕು. ವೇದಾಂತದ ಸಂದೇಶವನ್ನು ಪ್ರತಿ ಮನೆಮನೆಗೂ ಸಾರಿ, ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಬೇಕು. ನಾವು ಎಷ್ಟೇ ಅಲ್ಪವನ್ನು ಸಾಧಿಸಿದ್ದರೂ ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದೆವು ಎಂಬ ತೃಪ್ತಿ ನಮಗೆ ದೊರಕುತ್ತದೆ ಎಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ.

26. ಜ್ಞಾನಿ ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವನ್ನು ಬರೆಯಿರಿ.

ಉತ್ತರ : ಜಗತ್ತಿನಲ್ಲಿ ಅರಿತವರು ಮತ್ತು ಅರಿಯದವರು ಇರುತ್ತಾರೆ. ಅರಿಯವದವರೊಡನೆ ಸಂಗ ಮಾಡಿದರೆ ಕಲ್ಲನ್ನು ಹೊಡೆದು ಬೆಂಕಿಯನ್ನು ಪಡೆದಂತೆ ಅಪ್ರಯೋಜನಕಾರಿಯಾಗಿರುತ್ತದೆ. ಅರಿತವರೊಡನೆ ಸಂಗ ಮಾಡಿದರೆ ಮೊಸರನ್ನು ಕಡೆದು ಬೆಣ್ಣೆಯನ್ನು ಪಡೆದಂತೆ ಪ್ರಯೋಜನಕಾರಿಯಾಗಿರುತ್ತದೆ. ಇವು ಅರಿಯದವರ ಮತ್ತು ಬಲ್ಲವರ ಸಂಗದ ಪರಿಣಾಮಗಳು ಶರಣರ ಸಂಗವನ್ನು ಮಾಡಿದರೆ ಕರ್ಪೂರದ ಗಿರಿಯನ್ನು ಉರಿಯಕೊಂಬಂತೆ ಎನ್ನುವುದು ಅಕ್ಕಮಹಾದೇವಿಯವರ ಅಭಿಪ್ರಾಯವಾಗಿದೆ.

27. ಪೈಗಳು ಪ್ರಾಸ ತೊರೆಯಲು ನಿಶ್ಚಯಿಸಿದ ಸಂದರ್ಭವನ್ನು ವಿವರಿಸಿ.

ಉತ್ತರ : ಪೈಗಳು ಬರೋಡಾ ರಾಜ್ಯದ ನವಸಾರಿಯಲ್ಲಿದ್ದಾಗ ಒಂದು ಮುಂಜಾನೆ ಮಾಳಿಗೆಯಲ್ಲಿ ಶತಪತಗೈಯುತ್ತಿದ್ದಾಗ ಆಗೋದು ಹೋಗೋದು ದೇವರ ಇಚ್ಛೆ, ಹೂಡೋದು ಬಿತ್ತೋದು ನನ್ನ ಇಚ್ಛೆ. ಇನ್ನು ಮೀನ ಮೇಷ ನೋಡದೆ ಪ್ರಾಸವನ್ನು ಈಗಲೇ ತೊರೆಯುವುದು ಉತ್ತಮ ಎಂದುಕೊಂಡರು. ರವೀಂದ್ರನಾಥ ಠಾಕೂರರ ಭಾರತಲಕ್ಷ್ಮೀ, ವಿದಾಯ ಎಂಬ ಬಂಗಾಳಿ ಕವಿತೆಗಳನ್ನು, ಶೇಖ್ ಮಹಮ್ಮದ್ ಇಕ್ಬಾಲರ ಹಿಂದೂಸ್ಥಾನ ಹಮಾರಾ ಎಂಬ ಉರ್ದು ಗೀತವನ್ನು ಕನ್ನಡಿಸಿದರು. ನಂತರ ತಮ್ಮ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಅವನ್ನು ಪ್ರಕಟಿಸಿದರು.

V. ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು : 2 X 3 = 6

28. ಎ. ಎನ್. ಮೂರ್ತಿರಾವ್

ಉತ್ತರ : **ಎ. ಎನ್. ಮೂರ್ತಿರಾವ್ :** ಎ. ಎನ್. ಮೂರ್ತಿರಾವ್ ಅವರು ಸಾ. ಶ. ೧೯೦೦ರಂದು ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನಲ್ಲಿ ಜನಿಸಿದರು. ಶ್ರೀಯುತರು 'ಹಗಲುಗನಸುಗಳು, ಅಲೆಯುವಮನ, ಅಪರವಯಸ್ಕನ ಅಮೆರಿಕಾಯಾತ್ರೆ, ಮಿನುಗು–ಮಿಂಚು, ಪೂರ್ವಸೂರಿಗಳೊಡನೆ, ಚಂಡಮಾರುತ, ದೇವರು' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ಗೌರವ ಡಿ.ಲಿಟ್. ಪ್ರಶಸ್ತಿಗಳು ಲಭಿಸಿವೆ.

29. ದ. ರಾ. ಬೇಂದ್ರೆ

ಉತ್ತರ : **ದ. ರಾ. ಬೇಂದ್ರೆ :** ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಸಾ.ಶ. ೧೮೯೬ರಲ್ಲಿ ಧಾರವಾಡದಲ್ಲಿ ಜನಿಸಿದರು. ಶ್ರೀಯುತರು 'ಗರಿ, ಕೃಷ್ಣಕುಮಾರಿ, ನಗೆಯ ಹೊಗೆ, ಅರಳು–ಮರಳು, ನಾಕುತಂತಿ, ನಾದಲೀಲೆ, ಮೇಘದೂತ, ಗಂಗಾವತರಣ, ಸೂರ್ಯಪಾನ, ನಗೆಯ ಹೊಗೆ, ಸಾಹಿತ್ಯದ ವಿರಾಟ್ ಸ್ವರೂಪ' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರಗಳು ಲಭಿಸಿವೆ.

VI. ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು : 1 X 3 = 3

30. ಬಾಲಕರು ನೀವೆನ್ನ ಮಾತನು
ಕೇಳಿಯುದಕವ ಕುಡಿವುದೆನೆ ಭೂ
ಪಾಲ ನಿನ್ನವರೆನ್ನ ಮಾತನು ಕೇಳಿ ಮನ್ನಿಸದೆ

ಉತ್ತರ :

೩	೪	೩	೪	
- U	UU -	- U	- UU	
ಬಾಲ	ಕರುನೀ	ವೆನ್ನ	ಮಾತನು	= ೧೪

೩	೪	೩	೪	
- U	U UUU	U U U	U U -	
ಕೇಳಿ	ಯುದಕವ	ಕುಡಿವು	ದೆನೆಭೂ	= ೧೪

೩	೪	೩	೪	೩	೪	೨	
- U	- UU	- U	- U U	- U	- U U	-	
ಪಾಲ	ನಿನ್ನವ	ರೆನ್ನ	ಮಾತನು	ಕೇಳಿ	ಮನ್ನಿಸ	ದೆ	= ೨೩

ಛಂದಸ್ಸು : ಇದು ಮಾತ್ರಾಗಣ ಆಧಾರಿತ 'ಭೂಮಿನಿ ಷಟ್ಪದಿ'ಯ ಲಕ್ಷ್ಯವಾಗಿದೆ.

VII. ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು : **1 X 3 = 3**

31. "ಬಿರುಗಾಳಿಗೆ ತುತ್ತಾದ ಮರಗಿಡಗಳು ಬೀಳುವಂತೆ ಭರತಕುಲದ ನೂರೈವರು ಬಾಲಕರು ಬಿದ್ದರು."

ಉತ್ತರ : ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಂಕಾರ.

ಸಮನ್ವಯ : ಉಪಮೇಯ : ಭರತಕುಲದ ನೂರೈವರು ಬಾಲಕರು

ಉಪಮಾನ : ಬಿರುಗಾಳಿಗೆ ತುತ್ತಾದ ಮರಗಿಡಗಳು

ಉಪಮಾವಾಚಕ : ಅಂತೆ

ಸಮಾನಧರ್ಮ : ಬೀಳುವುದು

ಇಲ್ಲಿ ಉಪಮೇಯವಾದ 'ಭರತಕುಲದ ನೂರೈವರು ಬಾಲಕರನ್ನು' ಉಪಮಾನವಾದ 'ಬಿರುಗಾಳಿಗೆ ತುತ್ತಾದ ಮರಗಿಡಗಳಿಗೆ' ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು, 'ಬೀಳುವುದು' ಎಂಬ ಸಮಾನಧರ್ಮ ಇರುವುದರಿಂದ ಇದು ಉಪಮಾಲಂಕಾರ(ಪೂರ್ಣೋಪಮಾಲಂಕಾರ)ದ ಲಕ್ಷ್ಯವಾಗಿದೆ.

VIII. ಗಾದೆಯನ್ನು ವಿಸ್ತರಿಸಿ ಬರೆಯುವುದು : **1 X 3 = 3**

32. ಕೂಡಿಬಾಳಿದರೆ ಸ್ವರ್ಗಸುಖ.

ಅಥವಾ

ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ.

ಉತ್ತರ : ಕೂಡಿಬಾಳಿದರೆ ಸ್ವರ್ಗಸುಖ : ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ಎಲ್ಲರೊಡನೆ ಕಲೆತು ನಡೆಸುವ ಜೀವನ ಸ್ವರ್ಗಸುಖವನ್ನು ನೀಡುವುದು ಎಂಬ ತಾತ್ಪರ್ಯವನ್ನು ಈ ಗಾದೆಯು ನೀಡುವುದು.

"ಮಾನವ ಸಂಘಜೀವಿ, ಸಮಾಜ ಜೀವಿ". ಕೂಡಿ ಬಾಳುವುದರಲ್ಲಿ ಇರುವ ಪ್ರೀತಿ, ಕಾಳಜಿ ಮತ್ತು ಭದ್ರತೆಯು ಯಾವುದರಲ್ಲಿಯೂ ಸಿಗದು. ಒಂದೊಂದು ಕಡ್ಡಿಯನ್ನು ಬಹು ಸುಲಭವಾಗಿ ಮುರಿದು ಹಾಕಬಹುದು. ಅದೇ ಅನೇಕ ಕಡ್ಡಿಗಳನ್ನು ಒಟ್ಟಿಗೆ ಸೇರಿಸಿ ಕಟ್ಟು ಕಟ್ಟಿ ಮುರಿಯಲು ಸಾಧ್ಯವಿಲ್ಲ. "ಒಗ್ಗಟ್ಟಿನಲ್ಲಿ ಬಲವಿದೆ" ಎಂಬ ಮಾತು ಇದಕ್ಕೆ ಪುಷ್ಟಿ ನೀಡುತ್ತದೆ. ಸುಖಿ ಕುಟುಂಬಗಳು ತಮ್ಮ ಕುಟುಂಬದ ಸದಸ್ಯರ ನಡುವೆ ಅನ್ಯೋನ್ಯವಾದ ಬಾಂಧವ್ಯವನ್ನು ಹೊಂದಿರುತ್ತವೆ. ಸಮಾಜ ಮತ್ತು ಕುಟುಂಬಗಳು ಉತ್ತಮ ಬಾಂಧವ್ಯವವನ್ನು ಕಾಪಾಡುವ, ಪ್ರೋತ್ಸಾಹಿಸುವ ಜವಾಬ್ದಾರಿಯನ್ನು ಹೊಂದಿರುತ್ತವೆ. ವ್ಯಕ್ತಿಯು ತನ್ನ ಕುಟುಂಬದವರೊಡನೆ, ಸಮಾಜದೊಡನೆ ಸಾಮರಸ್ಯದಿಂದ ಕೂಡಿ ಬಾಳುವುದರಿಂದ ತನ್ನ ಸುಖ, ದುಃಖಗಳನ್ನು ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಕೂಡು ಬಾಳ್ವೆ ಅನ್ಯೋನ್ಯತೆ, ಆದರತೆಗಳ ಆಗರವಾಗಿ ಸ್ವರ್ಗ ಸುಖ ನೀಡುತ್ತದೆ ಎಂಬುದನ್ನು ಪ್ರಸ್ತುತ ಗಾದೆಯು ವ್ಯಕ್ತಪಡಿಸುವುದು.

ಅಥವಾ

ಉತ್ತರ : ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ : ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಗಾದೆ ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿದೆ. ಅಂತಹ ಅತ್ಯಂತ ಜನಪ್ರಿಯ, ಭಾವನಾತ್ಮಕ ಮತ್ತು ಸಾರ್ವಕಾಲಿಕ ಸತ್ಯವನ್ನು ಸಾರುವ ಗಾದೆ ಎಂದರೆ "ಉಪ್ಪಿಗಿಂತ ರುಚಿ ಇಲ್ಲ, ತಾಯಿಗಿಂತ ಬಂಧುವಿಲ್ಲ". ಈ ಗಾದೆಯು ನಮ್ಮ ದೈನಂದಿನ ಜೀವನದಲ್ಲಿ ಅತ್ಯಗತ್ಯವಾಗಿರುವ 'ಉಪ್ಪಿನ' ಮಹತ್ತ್ವವನ್ನು ಹಾಗೂ ನಮ್ಮ ಇಡೀ ಜೀವನದ ಆಧಾರ ಸ್ತಂಭವಾಗಿರುವ 'ತಾಯಿಯ' ಶ್ರೇಷ್ಠತೆಯನ್ನು ಅತ್ಯಂತ ಮಾರ್ಮಿಕವಾಗಿ ಹೋಲಿಸಿ ಹೇಳುತ್ತದೆ.

ನಾವು ಪ್ರತಿದಿನ ಎಷ್ಟೇ ಬಗೆಯ ಮೃಷ್ಟಾನ್ನ ಭೋಜನಗಳನ್ನು ಸಿದ್ಧಪಡಿಸಿದರೂ, ಅದಕ್ಕೆ ಪ್ರಮುಖವಾಗಿ ಬೇಕಾಗುವುದು ಉಪ್ಪು. ಕೇವಲ ಒಂದು ಚಿಟಿಕೆ ಉಪ್ಪು ಹಾಕಿದರೆ ಅಡುಗೆಗೆ ರುಚಿ ಬರುತ್ತದೆ. ಉಪ್ಪು ತನ್ನ ಅಸ್ತಿತ್ವವನ್ನು ಕರಗಿಸಿಕೊಂಡು ಇಡೀ ಆಹಾರಕ್ಕೆ ರುಚಿ ನೀಡುತ್ತದೆ. ಆದರೆ ಅದು ಕಣ್ಣಿಗೆ ಕಾಣಿಸುವುದಿಲ್ಲ.

ಉಪ್ಪಿಲ್ಲದ ಅಡುಗೆ ಹೇಗೆ ಸಪ್ಪೆಯೋ, ತಾಯಿಯಿಲ್ಲದ ಜೀವನವೂ ಅಷ್ಟೇ ಶೂನ್ಯ ಮತ್ತು ಕಷ್ಟಕರ. ಆಹಾರದಲ್ಲಿ ಉಪ್ಪಿನ ಮಹತ್ತ್ವವನ್ನು ನಾವು ಹೇಗೆ ನಿರ್ಲಕ್ಷಿಸಲು ಸಾಧ್ಯವಿಲ್ಲವೋ, ಹಾಗೆಯೇ ನಮ್ಮನ್ನು ಹೆತ್ತು ಹೊತ್ತು ಬೆಳೆಸಿದ ತಾಯಿಯ ಸ್ಥಾನವನ್ನು ಜಗತ್ತಿನ ಯಾವುದೇ ಸಂಪತ್ತು ಅಥವಾ ಸಂಬಂಧದಿಂದ ತುಂಬಲು ಸಾಧ್ಯವಿಲ್ಲ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ, ಕೇವಲ ಪ್ರೀತಿಯನ್ನು ಮಾತ್ರ ಕೊಡುವ ಏಕೈಕ ಜೀವಿ ತಾಯಿ. ತನ್ನ ರಕ್ತವನ್ನೇ ಹಾಲನ್ನಾಗಿ ಉಣಿಸಿ, ಹಗಲಿರುಳು ಕಷ್ಟಪಟ್ಟು ಮಕ್ಕಳನ್ನು ಸಲಹುವ ತಾಯಿ, ತನ್ನ ಸುಖ–ಸಂತೋಷಗಳನ್ನು ಮಕ್ಕಳಿಗಾಗಿ ತ್ಯಾಗ ಮಾಡುತ್ತಾಳೆ. ನಮಗೆ ಸಂಕಷ್ಟ ಎದುರಾದಾಗ, ಇಡೀ ಜಗತ್ತೇ ನಮ್ಮನ್ನು ಕೈಬಿಟ್ಟರೂ ಹೆತ್ತ ತಾಯಿ ಮಾತ್ರ ಕೊನೆಯವರೆಗೂ ಜೊತೆಗೆ ನಿಲ್ಲುತ್ತಾಳೆ. ಅವಳ ಕಷ್ಟಗಳು ಯಾರಿಗೂ ಕಾಣಿಸದಿದ್ದರೂ, ಅವಳ ಶ್ರಮದಿಂದ ಇಡೀ ಕುಟುಂಬವು ಸುಖವಾಗಿ ಬಾಳುತ್ತದೆ. ನಮ್ಮ ತಪ್ಪುಗಳನ್ನು ತಿದ್ದಿ, ಸನ್ಮಾರ್ಗದಲ್ಲಿ ಮುನ್ನಡೆಸುವ ಮೊದಲ ಗುರು ಮತ್ತು ಪರಮಾಪ್ತ ಬಂಧು ಅವಳೇ ಆಗಿದ್ದಾಳೆ. ತಾಯಿಯ ಪ್ರೀತಿ ಮತ್ತು ಉಪ್ಪಿನ ಋಣವನ್ನು ತೀರಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬುದು ಈ ಗಾದೆಯ ತಾತ್ಪರ್ಯವಾಗಿದೆ.

IX. ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು : 6 X 3 = 18

33. **"ಕೈಗಾರಿಕೀಕರಣ ಇಲ್ಲವೆ ಅವನತಿ"**

ಉತ್ತರ :

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಿ. ಎಸ್. ಜಯಪ್ಪಗೌಡ ಅವರು ಬರೆದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮೈಸೂರು ಸಂಸ್ಥಾನದ ದಿವಾನರಾದ ವಿಶ್ವೇಶ್ವರಯ್ಯನವರು ತಮ್ಮ ಆಡಳಿತದಲ್ಲಿ ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದರು. ಇದರ ಫಲವಾಗಿ ಅನೇಕ ಕಾರ್ಖಾನೆಗಳು ಮೈಸೂರು ರಾಜ್ಯದಲ್ಲಿ ಸ್ಥಾಪಿತಗೊಂಡು ಕಾರ್ಯಪ್ರಾರಂಭಿಸಿದವು. ಇವು ಮೈಸೂರು ರಾಜ್ಯವನ್ನು ಆರ್ಥಿಕವಾಗಿ ಸದೃಢವನ್ನಾಗಿಸಿದವು. ಇದರಿಂದ ಮೈಸೂರು ಮಾದರಿ ರಾಜ್ಯ ರೂಪುಗೊಳ್ಳಲು ಸಾಧ್ಯವಾಯಿತು ಎಂದು ವಿವರಿಸುವ ಸಂದರ್ಭದಲ್ಲಿ ಲೇಖಕರು ವಿಶ್ವೇಶ್ವರಯ್ಯನವರು ಘೋಷಿಸಿದ ನುಡಿ ಉದಾಹರಿಸುತ್ತಾ ನುಡಿದ ಮಾತಿದು.

ಸ್ವಾರಸ್ಯ : ದೇಶದ ಅಭಿವೃದ್ಧಿಗೆ ಕೈಗಾರಿಕೀಕರಣ ಮುಖ್ಯ. ಕೈಗಾರಿಕೆಗಳು ಆರ್ಥಿಕವಾಗಿ ದೇಶವನ್ನು ಸದೃಢಗೊಳಿಸಲು ಸಹಾಯಕ ಎಂಬುದನ್ನು ವಿಶ್ವೇಶ್ವರಯ್ಯನವರ ಘೋಷಣೆಯಲ್ಲಿ ಕಾಣಬಹುದು.

34. **"ಅವರು ಅಂದು ನುಡಿದದ್ದು ಇಂದು ನುಡಿದಂತೆ ಕೇಳಿಸುತ್ತಿದೆ."**

ಉತ್ತರ :

ಆಯ್ಕೆ : ಪ್ರಸ್ತುತ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮನುಷ್ಯನು ತನ್ನ ಪ್ರಜ್ಞೆಯ ಮುಂದೆ ಸುಳ್ಳು ಹೇಳಲು ಸಾಧ್ಯವಿಲ್ಲ. ಈ ಇಕ್ಕಟ್ಟಿಗೆ ವಚನಕಾರರು ಮುಖಾಮುಖಿಯಾದರು. ಅವರು ತಮ್ಮ ಕಷ್ಟ–ಸುಖ, ದುಃಖ–ದುಮ್ಮಾನಗಳನ್ನು ಅಂತರಂಗದ ಪ್ರಜ್ಞೆಯ ಮುಂದೆ ಹೇಳಿಕೊಳ್ಳುತ್ತಾ ಒದ್ದಾಡಿದರು. ಈ ತಳಮಳಕ್ಕೆ ಅವರು ವಚನಗಳ ಮೂಲಕ ನುಡಿ ರೂಪ ನೀಡಿದರು. ಆ ನುಡಿಗಳು ಸಾರ್ವಕಾಲಿಕ ಸತ್ಯವಾಗಿವೆ ಎಂದು ಲೇಖಕರು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ವಚನಕಾರರು ಅಂತರಂಗದ ಶುದ್ಧತೆಯಿಂದ ಬರೆದ ವಚನಗಳು ನೂರಾರು ವರ್ಷಗಳ ಹಿಂದಿನದಾದರೂ, ಅವು ಇಂದಿನ ಸಮಾಜಕ್ಕೆ ಪ್ರಸ್ತುತ ಮತ್ತು ಅನ್ವಯ ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

35. **"ಈ ಮಳೆಯಲ್ಲಿ ಈ ಕತ್ತಲಲ್ಲಿ ನಾನು ಯಾರನ್ನು ಕರೆಯಲಿ?"**

ಉತ್ತರ :

ಆಯ್ಕೆ : ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಸೇನಾ ಡಾಕ್ಟರ್ ರಾಹಿಲನು ಶತ್ರು ಸೈನಿಕರ ವೈಮಾನಿಕ ದಾಳಿಯಿಂದ ಸಮುದ್ರಕ್ಕೆ ಬಿದ್ದು ರಕ್ಷಣೆ ಪಡೆಯಲೆಂದು ಒಂಟಿ ಮನೆಯೆಡೆಗೆ ಬರುತ್ತಿದ್ದಾಗ ಮಹಿಳೆಯ ಆರ್ತನಾದ ಕೇಳಿಸುತ್ತದೆ. ಆ ಮನೆಯ ಸಮೀಪಕ್ಕೆ ಬಂದಾಗ ಹೆರಿಗೆ ನೋವಿನಿಂದ ಬಳಲುತ್ತಿದ್ದ ಸೊಸೆಗೆ ಮುದುಕಿ ಮೇಲಿನಂತೆ ಸಾಂತ್ವನ ಮಾಡುತ್ತಿರುವುದನ್ನು ರಾಹಿಲನು ಕೇಳಿಸಿಕೊಳ್ಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : 'ಬ್ಲಾಕ್‌ಔಟ್' ನಿಯಮದ ಸಮಯದಲ್ಲಿ ಸೊಸೆಯು ಹೆರಿಗೆ ನೋವನ್ನು ಅನುಭವಿಸುತ್ತಿರುವುದು ಹಾಗೂ ಸಹಾಯ ಮಾಡಲಾಗದ ಮುದುಕಿಯ ಅಸಹಾಯಕ ಸ್ಥಿತಿ ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

36. **"ಪಾಂಡವರೊಳಿಜಿದು ಛಲಮನೆ ಮೆರೆವೆಂ"**

ಉತ್ತರ :

ಆಯ್ಕೆ : ಪ್ರಸ್ತುತ ಸಾಲನ್ನು ರನ್ನನು ಬರೆದ 'ಸಾಹಸ ಭೀಮ ವಿಜಯಂ' ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಸಂಧಿಗೆ ಒಪ್ಪದ ದುರ್ಯೋಧನನು ಭೀಷ್ಮರನ್ನು ಕುರಿತು ನಾನು ಭೂಮಿಗಾಗಿ ಹೋರಾಡುತ್ತಿಲ್ಲ. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ನನ್ನವರನ್ನು ಕೊಂದ ಪಾಂಡವರನ್ನು ಇರಿದು ಛಲವನ್ನು ಮೆರೆಯುತ್ತೇನೆಂದು ಸಂಧಿಗೊಪ್ಪದೆ ಛಲದಿಂದ ಹೇಳುವ ಸಂದರ್ಭದಲ್ಲಿ ಈ ಮಾತು ಉಲ್ಲೇಖವಾಗಿದೆ.

ಸ್ವಾರಸ್ಯ : ತನ್ನ ವೈರಿಗಳಾದ ಪಾಂಡವರೊಂದಿಗೆ ಹೋರಾಡುವ ಅಚಲ ವೀರತನ ದುರ್ಯೋಧನನಲ್ಲಿ ಅಡಗಿರುವುದು ಹಾಗೂ ತಾನು ಯುದ್ಧವನ್ನು ಮಾಡಿಯೇ ತೀರುತ್ತೇನೆಂದು ಹೇಳುವಲ್ಲಿ ಅವನ ಗಟ್ಟಿತನ ಸ್ವಾರಸ್ಯಕರವಾಗಿ ಮೂಡಿಬಂದಿದೆ.

37. **"ಬೇರೆಬಣ್ಣವನೆ ಕಾಣೆ"**

ಉತ್ತರ :

ಆಯ್ಕೆ : ಪ್ರಸ್ತುತ ಸಾಲನ್ನು ಕುವೆಂಪುರವರು ಬರೆದ 'ಪಕ್ಷಿಕಾಶಿ' ಕೃತಿಯಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಆಶ್ವೀಜ ಮಾಸದಲ್ಲಿ ಬತ್ತದ ಗದ್ದೆಗೆ ಮುತ್ತುವ ಗಿಳಿಗಳ ಹಸುರು ಬಣ್ಣದ ನೋಟ, ಅದರ ಪಕ್ಕದಲ್ಲೇ ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ, ಹುಲ್ಲಿನ ಮಕಮಲ್ಲಿನ ಹೊಸ ಪಚ್ಚೆಯ ಜಮಖಾನೆ ಹರಡಿದಂತೆ ಎಂದು ಪ್ರಕೃತಿ ಸೌಂದರ್ಯವನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ : ಭೂಮಿಯ ಮೇಲೆ ಎಲ್ಲೆಂದರಲ್ಲಿ ವಿವಿಧ ರೂಪದಲ್ಲಿ ಹಸುರು ಪಸರಿಸಿರುವುದನ್ನು ನೋಡಿ ಕವಿ ಬೇರೆ ಬಣ್ಣಗಳೇ ಕಾಣದಾದವು ಎಂದು ಹೇಳಿರುವಲ್ಲಿ ಅವರ ರಸಸ್ವಾದನೆಯ ಔನ್ನತ್ಯವನ್ನು ಅಭಿವ್ಯಕ್ತಪಡಿಸಿರುವುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿದೆ.

38. **"ಎರೆದಂ ಶ್ರುತಪಾರಗನೆಂತು ಸಂತಸಂ ಬಡಿಸುವೆನ್"**

ಉತ್ತರ :

ಆಯ್ಕೆ : ಪ್ರಸ್ತುತ ಸಾಲನ್ನು ಪಂಪನು ಬರೆದ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಪರಶುರಾಮರು ತಮ್ಮಲ್ಲಿದ್ದ ಸಂಪತ್ತನ್ನೆಲ್ಲ ಬೇಡಿದವರಿಗೆ ದಾನ ಮಾಡಿ, ಇಡೀ ಭೂಮಂಡಲವನ್ನು ತನ್ನ ಗುರು ಕಶ್ಯಪ ಮುನಿಗೆ ಧಾರೆಯೆರೆದು ಕಾಡಿಗೆ ತಪಸ್ಸಿಗೆ ಹೋಗಲು ಸಿದ್ಧರಾದ ಸಮಯದಲ್ಲಿ ದ್ರೋಣರು ಅವರ ಬಳಿ ದಾನ ಬೇಡಲು ಬರುತ್ತಾರೆ. ಆಗ ಪರಶುರಾಮರು "ನನ್ನ ಬಳಿ ಕೊಡುವುದಕ್ಕೆ ಈಗ ಒಂದು ಅಡಕೆಯೂ ಇಲ್ಲ. ಇಂತಹ ಸಮಯದಲ್ಲಿ ಬೇಡುತ್ತಾ ಬಂದಿರುವ ಈ ವೇದಶಾಸ್ತ್ರ ಪಾರಂಗತನಾದ ಬ್ರಾಹ್ಮಣನನ್ನು (ದ್ರೋಣರನ್ನು) ನಾನು ಹೇಗೆ ತಾನೇ ಸಂತೋಷಪಡಿಸಲಿ?" ಎಂದು ಪಶ್ಚಾತ್ತಾಪದಿಂದ ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಇಲ್ಲಿ ಪರಶುರಾಮರ ದಾನಗುಣ ಹಾಗೂ ದ್ರೋಣರ ವಿದ್ವತ್ತಿಗೆ ತಕ್ಕಂತೆ ದಾನ ನೀಡಲಾಗಲಿಲ್ಲವಲ್ಲ ಎಂಬ ಅವರ ಮನದಾಳದ ವ್ಯಥೆ ಅತ್ಯಂತ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

X. ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) : **1 X 4 = 4**

39. ಕಲುಷಿತವಾದೀ .....
.....
.....
..... ಮುಟ್ಟೋಣ

ಅಥವಾ

ಮತಗಳೆಲ್ಲವೂ .....
.....
.....
..... ಬಿತ್ತೋಣ

ಉತ್ತರ : ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

ಅಥವಾ

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ–ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

XI. ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು : 1 X 4 = 4

40. ನಿನಗೆ ಹಸ್ತಿನಪುರದ ರಾಜ್ಯದ
ಘನತೆಯನು ಮಾಡುವೆನು ಪಾಂಡವ
ಜನಪ ಕೌರವ ಜನಪರೋಲೈಸುವರು ಗದ್ದುಗೆಯ
ನಿನಗೆ ಕಿಂಕರವೆರಡು ಸಂತತಿ
ಯೆನಿಸಲೊಲ್ಲದೆ ನೀನು ದುರಿಯೋ
ಧನನ ಬಾಯ್ದಂಬುಲಕೆ ಕೈಯಾನುವರೆ ಹೇಳೆಂದ

ಉತ್ತರ : ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ಕೌರವನು ನಿರಾಕರಿಸುತ್ತಾನೆ. ಯುದ್ಧ ಅನಿವಾರ್ಯವೆಂದಾದಾಗ ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಂದ ಪಾಂಡವರಿಗೆ ಅಪಾಯವಾಗದಂತೆ ಮಾಡುವುದು ಕವಿ ಕುಮಾರವ್ಯಾಸನು ಬರೆದ 'ಕೌರವೇಂದ್ರನ ಕೊಂದೆ ನೀನು' ಪದ್ಯಪಾಠದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

ಕೃಷ್ಣನು ಕರ್ಣನಿಗೆ ಆಮಿಷ ಒಡ್ಡುತ್ತಾ, "ನಿನ್ನನ್ನು ಹಸ್ತಿನಾಪುರಕ್ಕೆ ರಾಜನನ್ನಾಗಿ ಮಾಡುತ್ತೇನೆ. ಪಾಂಡವರಾಜರೂ ಕೌರವರಾಜರೂ ನಿನ್ನ ಗದ್ದುಗೆಯನ್ನು ಓಲೈಸುವರು. ನಿನಗೆ ಎರಡು ಸಂತತಿಯವರು ಮರುಮಾತನಾಡದೆ ಸೇವೆಯನ್ನು ಮಾಡುವರು. ಇದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ" ಎಂದು ಹೇಳುತ್ತಾನೆ.

ಪ್ರಕೃತ ಕಾವ್ಯಭಾಗದಲ್ಲಿ ಕೌರವನ ಸೇನೆಯಲ್ಲಿ ಪಾಂಡವರನ್ನು ಕೊಲ್ಲಬಲ್ಲ ಬಲಶಾಲಿಯೆಂದರೆ ಕರ್ಣ. ಕರ್ಣನಿಂದ ಪಾಂಡವರನ್ನು ರಕ್ಷಿಸಲು ಆತನಿಗೆ ಜನ್ಮರಹಸ್ಯವನ್ನು ತಿಳಿಸುತ್ತ ಕೃಷ್ಣನು ಕರ್ಣನಿಗೆ ರಾಜ್ಯದ ಅಧಿಕಾರದ ಗದ್ದುಗೆಯ ಆಮಿಷ ಒಡ್ಡಿ ಕರ್ಣನ ಮನಗೆಲ್ಲಲು ಪ್ರಯತ್ನಿಸಿರುವ ಮೌಲಿಕ ಅಂಶ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

XII. ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : **2 X 4 = 8**

41. ಮತಂಗಾಶ್ರಮದ ಬಳಿ ರಾಮಲಕ್ಷ್ಮಣರು ಸೀತೆಯನ್ನು ನೆನೆದು ದುಃಖಿಸಿದ ಪರಿ ಹಾಗೂ ಪರಸ್ಪರರು ಸಮಾಧಾನ ಪಡಿಸಿಕೊಂಡ ಬಗೆಯನ್ನು ಬರೆಯಿರಿ.

ಅಥವಾ

ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

ಉತ್ತರ : ಶ್ರೀರಾಮನ ಗುಣ ಸ್ವಭಾವದ ಸೆಳೆತಕ್ಕೆ ಸಿಲುಕಿ, ಆತನನ್ನು ಕಾಣುವುದೇ ಜೀವನದ ಏಕೈಕ ಗುರಿ ಎಂದು ಭಾವಿಸಿದ್ದ ಶಬರಿ ಮತಂಗಾಶ್ರಮದಲ್ಲಿ ವಾಸವಾಗಿದ್ದಳು. ಮತಂಗರು ದಿವ್ಯಲೋಕವನ್ನು ಸೇರಿದ ಬಳಿಕ ರಾಮಧ್ಯಾನದಲ್ಲಿ ನಿರತಳಾಗಿ ರಾಮನ

ದರ್ಶನಕ್ಕಾಗಿ ಹಗಲಿರುಳು ಕಾಯುತ್ತಿದ್ದಳು. ಇತ್ತ ಸೀತಾಪಹರಣದಿಂದ ದುಃಖಿತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಅರಸುತ್ತ ಕಾಡಿನಲ್ಲಿ ಅಲೆದಾಡುತ್ತಿದ್ದರು. ಎಲ್ಲಿಯೂ ಸೀತೆಯ ಸುಳಿವು ಸಿಗದೇ ಇದ್ದಾಗ ರಾಮ ಗಿರಿವನಗಳನ್ನು ಕುರಿತು ಭೂಮಿಜಾತೆ, ಆತ್ಮಕಾಮ ಕಲ್ಪಲತೆಯಾದ ಸೀತೆ ನನಗೆ ದೊರೆಯುವುದಿಲ್ಲವೆ? ಅವಳ ನೆಲೆ ತಿಳಿದಿಲ್ಲವೆ? ಈ ಶೋಕದ ಬೇಗೆ ನನ್ನನ್ನು ಸುಡುತ್ತಿದೆ ಎಂದು ದುಃಖಿಸುತ್ತಾನೆ. ಆಗ ಲಕ್ಷ್ಮಣ ಅಣ್ಣನನ್ನು ಕುರಿತು, ಸೂರ್ಯನೇ ತೇಜಸ್ಸನ್ನು ಕಳೆದುಕೊಂಡರೆ ಅಖಿಲ ಲೋಕಕ್ಕೆ ತೇಜಸ್ಸನ್ನು ನೀಡುವವರು ಯಾರು? ನೀನೇ ಧೈರ್ಯವನ್ನು ಕಳೆದುಕೊಂಡರೆ ಧೈರ್ಯ ನೀಡುವವರು ಯಾರು? ತಾಳ್ಮೆ ಕಳೆದುಕೊಳ್ಳಬೇಡ ಎಂದು ಸಂತೈಸುತ್ತಾನೆ. ಸೀತೆಯ ನೆನಪಿನ ಸೆಳೆತಕ್ಕೆ ನನ್ನ ಆತ್ಮ ಸಿಲುಕಿದೆ. ಈ ಶೋಕ ನನಗೆ ಅನಿವಾರ್ಯವಾಗಿದೆ. ಅಗೋ ನೋಡು ಲಕ್ಷ್ಮಣ ಋಷಿಗಳ ಆಶ್ರಮ. ಇದನ್ನು ನೋಡಿದಾಗಲೆಲ್ಲ ಸೀತೆಯ ನೆನಪಾಗುತ್ತದೆ ಎಂದು ರಾಮ ಹೇಳುತ್ತಾನೆ. ಹೌದು ಅಣ್ಣ ಚಿತ್ರಕೂಟದಲ್ಲಿ ಅತ್ತಿಗೆಯೊಂದಿಗೆ ಕಳೆದ ದಿನಗಳು ನೆನಪಾಗುತ್ತಿವೆ. ನಾನೇ ಪಾಪಿ. ಆಕೆಯನ್ನು ಒಂಟಿಯಾಗಿ ಬಿಟ್ಟೆ. ನನ್ನ ಅಹಂಕಾರಕ್ಕೆ ಮನ್ನಣೆ ಕೊಟ್ಟೆ ಎಂದಾಗ, ಮರುಗಬೇಡ ಲಕ್ಷ್ಮಣ ಆದದ್ದು ಆಯಿತು. ನಿಮ್ಮನ್ನು ಆ ದೇವರೇ ಹೀಗೆ ಮರಳು ಮಾಡಿತ್ತು. ಅದಿರಲಿ ನಾವೀಗ ದನು ಸೂಚಿಸಿದ ದಾರಿಯಲ್ಲಿ ಬಂದಿದ್ದೇವೆಯೇ? ಇದು ಶಬರಿಯ ಆಶ್ರಮ ಇರಬಹುದೆ? ಯಾವುದೋ ಹುಚ್ಚಿ ನಮ್ಮೆಡೆಗೆ ಬರುತ್ತಿದ್ದಂತಿದೆ. ಯಾರಿರಬಹುದು ಎಂದು ರಾಮ ಹೇಳಿದಾಗ ಲಕ್ಷ್ಮಣ ಮರೆಯಲ್ಲಿ ನಿಂತು ಪರೀಕ್ಷಿಸೋಣ. ಆಗ ಯಾರೆಂದು ತಿಳಿಯುತ್ತದೆ ಎಂದು ಇಬ್ಬರೂ ಮರೆಯಲ್ಲಿ ನಿಂತು ಆಕೆಯನ್ನು ಗಮನಿಸುತ್ತಾರೆ. ಆಕೆಯೇ ಶಬರಿ ಎಂದು ತಿಳಿಯುತ್ತದೆ. ಹೀಗೆ ಪರಸ್ಪರರು ಸಮಾಧಾನ ಮಾಡಿಕೊಂಡು ರಾಮ ಲಕ್ಷ್ಮಣರಿಬ್ಬರು ಶಬರಿಯ ಆಶ್ರಮಕ್ಕೆ ಬಂದು ಶಬರಿಯನ್ನು ದರ್ಶಿಸುತ್ತಾರೆ.

ಅಥವಾ

ಉತ್ತರ : ಶಬರಿಯು ಮತಂಗ ಋಷಿಯ ಆಶ್ರಮದಲ್ಲಿ ಇದ್ದ ತಪಸ್ವಿನಿ. ಮತಂಗ ಋಷಿಯ ಪ್ರಿಯ ಶಿಷ್ಯೆ. ಸಿದ್ಧರಾದ ಮತಂಗ ಋಷಿಗಳು ತಮ್ಮ ಅಂತ್ಯಕಾಲದಲ್ಲಿ ಶಬರಿಯ ಮೇಲೆ ಕರುಣೆಯನ್ನು ತೋರಿ ಶ್ರೀರಾಮಲಕ್ಷ್ಮಣರು ಈ ಆಶ್ರಮಕ್ಕೆ ಬರುತ್ತಾರೆ. ನಿನಗೆ ಶ್ರೀರಾಮಲಕ್ಷ್ಮಣರ ದರ್ಶನದಿಂದ ಒಳ್ಳೆಯದಾಗುತ್ತದೆ. ನಿನ್ನಿಷ್ಟಾರ್ಥ ನೆರವೇರುತ್ತದೆ ಎಂದು ಹೇಳಿದರು. ಗುರುಗಳ ಈ ಮಾತನ್ನು ನಂಬಿದ ಶಬರಿಯು ಶ್ರೀರಾಮನ ಆಗಮನಕ್ಕಾಗಿ ಪ್ರತಿನಿತ್ಯ ಕಾಯುತ್ತಿದ್ದಳು. ಶಬರಿಯು ಗುರುಗಳ ಮಾತಿನ ಮೇಲೆ ಇಟ್ಟ ನಂಬಿಕೆ ಹಾಗೂ ಶ್ರೀರಾಮನಿಗಾಗಿ ಹಂಬಲಿಸುತ್ತ ಕಾಯುತ್ತಿದ್ದ ಅವಳ ತಾಳ್ಮೆಯು ಹುಸಿಯಾಗಲಿಲ್ಲ. ಮತಂಗ ಋಷಿಗಳು ಶಬರಿಗೆ ಹೇಳಿದ ಮಾತಿನಂತೆ ರಾಮಲಕ್ಷಣರು ಶಬರಿಯ ಆಶ್ರಮಕ್ಕೆ ಭೇಟಿ ನೀಡುತ್ತಾರೆ. ಶಬರಿಯು ಶ್ರೀರಾಮನ ದರ್ಶನದಿಂದ ಪುಳಕಿತಳಾಗುತ್ತಾಳೆ. ಶಬರಿಯು ಶ್ರೀರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಳ್ಳುತ್ತಾಳೆ. ಅಯ್ಯೋ, ಏನೂ ಸಿದ್ಧತೆಯಿಲ್ಲ; ನಿನ್ನೆಯಷ್ಟು ಚೆನ್ನವಿಲ್ಲ ಎಂದು ಹಂಬಲಿಸಿ, ತನ್ನ ಮನದ ಬಯಕೆಯಂತೆ ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ, ಅಬ್ಬಾ ಎಂದು ಹಿಗ್ಗಿಹಿಗ್ಗಿ ಸಂತಸ ಪಡುತ್ತಾಳೆ. ನಂತರ ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೆ ಇಲ್ಲ. ನಿಮಗೆಂದು ತಂದೆನೆಂದು ಎಂದು ಹೇಳುತ್ತ ತಾನೇ ಅವರ ಕೈಯಲ್ಲಿ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸುತ್ತಾಳೆ. ಶಬರಿಯು ಶ್ರೀರಾಮನಲ್ಲಿ ತನಗೆ ಮುಕ್ತಿಯನ್ನು ನೀಡುವಂತೆ ಬೇಡಿಕೊಂಡು ವೇದಿಯಲ್ಲಿದ್ದ ಅಗ್ನಿಯನ್ನು ಪ್ರವೇಶಿಸಿ ಮುಕ್ತಿಯನ್ನು ಪಡೆಯುತ್ತಾಳೆ. ಮುನಿಗಳ ಮಾತನ್ನು ನಂಬಿ, ಹಲವಾರು ವರ್ಷಗಳಿಂದ ರಾಮನ ದರ್ಶನಕ್ಕಾಗಿ ಸಹನೆಯಿಂದ ಕಾಯುತ್ತ, ಶ್ರೀರಾಮನು ತನ್ನ ಬಳಿಗೆ ಬರುವ ಸುದಿನವನ್ನು ಎದುರು ನೋಡುತ್ತಿದ್ದ ಶಬರಿಗೆ ರಾಮನ ದರ್ಶನವಾಗುತ್ತದೆ. ಶಬರಿಯ ಮನದಾಸೆ ಈಡೇರುತ್ತದೆ. ಆಕೆಯ ಚಿಂತೆ ಹಿಂಗಿಹೋಗುತ್ತದೆ.

42. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವಾದ ಅಂಶಗಳನ್ನು ಸಂಗ್ರಹಿಸಿ ಬರೆಯಿರಿ.

ಅಥವಾ

ಲವನಲ್ಲಿದ್ದ ಕ್ಷಾತ್ರಗುಣ 'ವೀರಲವ' ಪದ್ಯದಲ್ಲಿ ವ್ಯಕ್ತಗೊಂಡಿರುವುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉತ್ತರ : ರಾಮನ ಅಶ್ವಮೇಧಯಾಗದ ಕುದುರೆ ದೇಶದೇಶಗಳಲ್ಲಿ ಸಂಚರಿಸುತ್ತದೆ. ಶ್ರೀರಾಮನ ಯಾಗದ ಕುದುರೆ ಎಂದು ತಿಳಿದು ರಾಜ ಮಹಾರಾಜರುಗಳು ಅದನ್ನು ಕಟ್ಟಿ ಹಾಕದೆ ನಮಸ್ಕರಿಸಿ ಕಳುಹಿಸುತ್ತಾರೆ. ಹೀಗೆ ಭೂಮಂಡಲದಲ್ಲೆಲ್ಲಾ ಸಂಚರಿಸುತ್ತಾ ಬಂದ ಕುದುರೆ ವಾಲ್ಮೀಕಿ ಆಶ್ರಮದ ಉಪವನದ ಹುಲ್ಲನ್ನು ಕಂಡು ಆಕರ್ಷಿತವಾಗಿ ತಿನ್ನಲು ಬಯಸಿ ಉದ್ಯಾನವನ್ನು ಪ್ರವೇಶಿಸಿತು. ಅಲ್ಲಿದ್ದ ಹೂವಿನ ಗಿಡಗಳನ್ನು ಚೆನ್ನಾಗಿ ತುಳಿದು ಹುಲ್ಲನ್ನು ತಿನ್ನಲಾರಂಭಿಸಿತು. ಉದ್ಯಾನವನದ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಲವನು ಕುದುರೆಯನ್ನು ಕಟ್ಟಿಹಾಕಲು ಬಂದಾಗ ಅದರ ಹಣೆಯಲ್ಲಿದ್ದ ಲೇಖನವನ್ನು ಓದುತ್ತಾನೆ. "ಈ ಭೂಮಿಯಲ್ಲಿ ಕೌಸಲ್ಯೆಯ ಮಗ ರಾಮನೊಬ್ಬನೇ ವೀರನು. ಅವನ ಯಾಗದ ಕುದುರೆಯಿದು. ಇದನ್ನು ಕಟ್ಟಿಹಾಕುವ ವೀರರು ಯಾರಾದರೂ ಇದ್ದರೆ ಕಟ್ಟಿಹಾಕಬಹುದು." ಈ ಮಾತುಗಳಿಂದ ಲವನು ಕೋಪಗೊಳ್ಳುತ್ತಾನೆ. ಕೌಸಲ್ಯೆಯ ಮಗ ರಾಮನು ಮಾತ್ರ ವೀರನೇ? ಜಾನಕಿಯ ಮಗನಾದ ನಾನು ವೀರನಲ್ಲವೇ? ತಾನೀಗ ಕುದುರೆಯನ್ನು ಕಟ್ಟಿಹಾಕದಿದ್ದರೆ ಲೋಕದ ಜನರು

ತನ್ನ ಮಾತೆಯಾದ ಜಾನಕಿಯನ್ನು ಬಂಜೆಯೆನ್ನದೆ ಇರುವರೇ? ಎಂದು ತನ್ನ ಉತ್ತರೀಯದಿಂದ ಆ ಕುದುರೆಯನ್ನು ಬಾಳೆಗಿಡಕ್ಕೆ ಕಟ್ಟಿಹಾಕಲು ಮುಂದಾಗುತ್ತಾನೆ. ಆಗ ಅಲ್ಲಿದ್ದ ತಪಸ್ವಿ ಪುತ್ರರು ಅದು ಅರಸರ ಕುದುರೆ ಅದನ್ನು ಕಟ್ಟಿಹಾಕಿದರೆ ನಮ್ಮನ್ನು ಹೊಡೆಯುವರು ಎಂದು ಬಾಲಸಹಜ ಭಯದಿಂದ ಹೇಳಿದಾಗ, "ಋಷಿಯ ಮಕ್ಕಳಾದ ನೀವು ಅಂಜಿದರೆ ಕ್ಷತ್ರಿಯ ಕುಲಜನಾದ ನಾನು ಹೆದರುವುದೇ?" ಎಂದು ಆ ಕುದುರೆಯನ್ನು ಕಟ್ಟಿಹಾಕುತ್ತಾನೆ.

ಅಥವಾ

ಉತ್ತರ : ಬಾಲಕನಾದ ಲವನಲ್ಲಿದ್ದ ಕ್ಷತ್ರಿಯ ಸಹಜವಾದ ವರ್ತನೆ, ಧೈರ್ಯ, ಸಾಹಸ ಪ್ರವೃತ್ತಿ, ಯಾವುದೇ ಕಾರ್ಯದಲ್ಲಿ ಎದೆಗುಂದದೆ ಮುನ್ನುಗ್ಗುವ ನಾಯಕತ್ವದ ಗುಣಗಳನ್ನು ಸಹಜ ಸುಂದರವಾಗಿ ಕವಿ ಲಕ್ಷ್ಮೀಶ ವರ್ಣಿಸಿದ್ದಾನೆ. ವಾಲ್ಮೀಕಿ ಮುನಿಗಳು ತನಗೆ ಉದ್ಯಾನವನದ ರಕ್ಷಣೆಯ ಜವಾಬ್ದಾರಿಯನ್ನು ಕೊಟ್ಟಿರುವುದರಿಂದ ಬಾಲಕ ಲವ ಅದರ ಆರೈಕೆಯನ್ನು ನಿಷ್ಠೆಯಿಂದ ಮಾಡುತ್ತಿದ್ದನು. ಶ್ರೀರಾಮನ ಯಾಗದ ಕುದುರೆ ಬಂದು ಉದ್ಯಾನವನದ ಹೂಗಿಡಗಳನ್ನು ನುಗ್ಗು ನುರಿಯಾಗುವಂತೆ ತುಳಿಯುತ್ತಿರುವುದನ್ನು ಕಂಡು ಆತನಿಗೆ ಕೋಪ ತಡೆಯಲಾಗಲಿಲ್ಲ. ಯಾವುದೀ ಕುದುರೆ ನಮ್ಮ ಉದ್ಯಾನವನಕ್ಕೆ ಬಂದಿದೆಯಲ್ಲಾ ಎಂದು ಆತ ಅದರ ಹತ್ತಿರ ಹೋಗುತ್ತಾನೆ. ಅದರ ಹಣೆಯ ಪಟ್ಟಿಯಲ್ಲಿದ್ದ ಲೇಖನ ಆತನ ಕ್ಷಾತ್ರರಕ್ತ ಮತ್ತಷ್ಟು ಕುದಿಯುವಂತೆ ಮಾಡುತ್ತದೆ. ಕೌಸಲ್ಯಾ ಪುತ್ರನಾದ ರಾಮನೊಬ್ಬನೇ ವೀರನಂತೆ. ಜಾನಕಿಯ ಮಗನಾದ ನಾನು ವೀರನಲ್ಲವೇ? ಎನ್ನುವಲ್ಲಿ ಕ್ಷತ್ರಿಯ ಪುತ್ರಿ ಜಾನಕಿಯ ಮಗನಾದ ಲವನಲ್ಲಿರುವ ಕ್ಷಾತ್ರ ತೇಜಸ್ಸು ಹೊಮ್ಮಿ ರಾಮನ ಗರ್ವವನ್ನು ಬಿಡಿಸದಿದ್ದರೆ ನನಗೆ ಇರುವ ತೋಳುಗಳು ಏತಕ್ಕೆಂದು ವೀರಾವೇಷದಿಂದ ಕುದುರೆಯನ್ನು ಕಟ್ಟಿಹಾಕಲು ಮುಂದಾಗುತ್ತಾನೆ. ಶಾಂತಿಪ್ರಿಯರಾದ ಮುನಿಕುಮಾರರು ಬೇಡ ಅರಸರ ಕುದುರೆ ಎಂದು ಭಯಭೀತರಾದರೆ, ಮುನಿಸುತರ ಮಕ್ಕಳು ಹೆದರಿದರೆ ಜಾನಕಿಯ ಮಗನಿದಕೆ ಬೆದರುವನೇ? ಎಂದು ತನ್ನಲ್ಲಿ ರಕ್ತಗತವಾಗಿ ಬಂದಿರುವ ಧೈರ್ಯ, ಶೌರ್ಯ ಬಾಲಸಹಜ ಸಾಹಸ ಪ್ರವೃತ್ತಿಯನ್ನು ಮೆರೆಯುತ್ತಾನೆ. ಹೀಗೆ ಲವನ ಕ್ಷಾತ್ರಗುಣ ಪದ್ಯದುದ್ದಕ್ಕೂ ಅರ್ಥಪೂರ್ಣವಾಗಿ ಮೂಡಿಬಂದಿದೆ.

XIII. ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರ ಬರೆಯುವುದು(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :

1 X 4 = 4 (2+2)

43. ದೇಶಹಿತವೇ ದೊರೆಯ ವ್ರತ. ಪ್ರಜಾಪಾಲನೆಯೇ ಆದ್ಯ ಕರ್ತವ್ಯ. ಧರ್ಮಶಾಸ್ತ್ರದ ದಾಸನಾಗಿ, ನ್ಯಾಯದ ಸೂತ್ರಧಾರನಂತೆ ಇದ್ದವರು ಅಮೋಘವರ್ಷ ನೃಪತುಂಗ ಮಹಾರಾಜರು. ಸ್ವದೇಶಕ್ಕೆ ಧಕ್ಕೆ ಬಂದಾಗ ಸುಮ್ಮನೆ ಕೂರದೆ ಆಕ್ರಮಣಕಾರಿಗಳೊಂದಿಗೆ ಯುದ್ಧ ಮಾಡುತ್ತಿದ್ದರು. ಯುದ್ಧವೆಂಬುದು ರಾಜಧರ್ಮವಾಗಿತ್ತು. ಈ ಧರ್ಮದ ಆಚರಣೆಗೆ ಎಂದೂ ಕುಂದು ತಂದವರಲ್ಲ. ರಾಜ್ಯಾಧಿಪತ್ಯದಂತೆ ಸಾಹಿತ್ಯವೂ ಅವರ ಮನಕ್ಕೆ ಸನಿಹವಾಗಿತ್ತು. ಕ್ರಿ. ಶ. ೮೦೦ರಲ್ಲಿ ಇಡೀ ದಕ್ಷಿಣದ ಜೊತೆಗೆ ಉತ್ತರ ಭಾರತವೂ ಗೋವಿಂದ ನೃಪತಿಯ ಸಾರ್ವಭೌಮತೆಯನ್ನು ಒಪ್ಪಿಕೊಂಡಿತು. ದಂಪತಿ ಸಮೇತರಾಗಿ ತೀರ್ಥಯಾತ್ರೆ ಹೊರಟರು. ಯಾತ್ರೆಯಿಂದ ಹಿಂದಿರುಗಿದ ೧೦ ತಿಂಗಳ ಬಳಿಕ ರಾಣಿ ಗಂಡು ಮಗುವಿಗೆ ತಾಯಿಯಾದಳು. ಈ ಮಗುವಿಗೆ ಅಮೋಘವರ್ಷ ಎಂದು ನಾಮಕರಣ ಮಾಡಿದರು. ಕ್ರಿ. ಶ. ೮೧೪ರಲ್ಲಿ ತಂದೆ ಗೋವಿಂದ ನೃಪತಿಯ ದೇಹ ಅವಸಾನವಾಯಿತು. ಚಕ್ರವರ್ತಿಯಾಗಬೇಕಿದ್ದ ಅಮೋಘವರ್ಷ ಹದಿಮೂರರ ಹಸುಳೆ. ಹಿಂದೆ ಗೋವಿಂದ ರಾಜನಿಂದ ಸೋತು ಸುಣ್ಣವಾಗಿದ್ದವರೆಲ್ಲಾ ಮತ್ತೆ ತಲೆ ಎತ್ತಿದರು. ಆದರೆ ಪ್ರಧಾನ ಮಂತ್ರಿ ಪಾತಾಳಮಲ್ಲ ಮತ್ತು ಸೇನಾಧ್ಯಕ್ಷ ಬಂಕೇಶ ರಾಷ್ಟ್ರಕೂಟ ಸಿಂಹಾಸನಕ್ಕೆ ಬೆಂಗಾವಲಾಗಿ ನಿಂತರು. ಇವರಿಬ್ಬರ ರಾಜನಿಷ್ಠೆ, ಕಾರ್ಯದಕ್ಷತೆ, ರಾಜಪೀಠಕ್ಕೆ ವಜ್ರರಕ್ಷೆಯಾದವು. ಗಂಗರ ಗೂಢಚಾರರಿಂದ ಅಮೋಘವರ್ಷನ ಹತ್ಯೆಗೆ ರೂಪಿಸಿದ ಸಂಚು ವಿಫಲವಾಯಿತು. ಗೋದಾವರಿಯಿಂದ ಕಾವೇರಿಯವರೆಗೆ ನಿಷ್ಕಂಟಕವಾದ ನಾಡಿನಲ್ಲಿ ಅಮೋಘವರ್ಷನು ಸಿಂಹಾಸನರೂಢನಾದನು. ಮುಂದೆ ಪರಮಾರ ರಾಜಕನ್ಯೆ ಲಕ್ಷ್ಮೀದೇವಿಯೊಡನೆ ವಿವಾಹವಾಯಿತು. ಪ್ರಜಾವತ್ಸಲರಾದ ಇಬ್ಬರೂ ಪ್ರಜೆಗಳಿಗೆ ತಂದೆ ತಾಯಿಗಳೆನಿಸಿದರು. ಇವರ ಅರಮನೆಯನ್ನು ಬೆಳಗಿದ ಮೊದಲ ಶಿಶು ಶಂಖಾದೇವಿ. ಪ್ರಾಪ್ತ ವಯಸ್ಕಳಾದ ಮಗಳನ್ನು ಕರೆದು, "ಮಗಳೇ ನೀನು ಸಾಮಾನ್ಯ ಪ್ರಜೆಯ ಮನೆಯಲ್ಲಿ ಹುಟ್ಟಿದ್ದರೆ ಸುಖವಾಗಿರಬಹುದಿತ್ತೆನೋ, ಆದರೆ ರಾಷ್ಟ್ರಕೂಟರ ಅರಮನೆಯಲ್ಲಿ ಹುಟ್ಟಿರುವುದರಿಂದ ದೇಶದ ಇಷ್ಟಾರ್ಥಗಳ ಜೊತೆಗೆ ನಿನ್ನನ್ನು ಜೋಡಿಸಿಕೊಳ್ಳಬೇಕಾಗಿದೆ. ರಾಜರ ಜೀವನವೆಲ್ಲ ನೆರೆಹೊರೆಯ ಬಂದು ಬಾಂಧವರೊಡನೆ ಯುದ್ಧ ಮಾಡುವುದರಲ್ಲಿಯೇ ಕಳೆದು ಹೋದರೆ ರಾಜತ್ವ ಸಾರ್ಥಕವಾಗುವುದಿಲ್ಲ. ದೇಶದೊಳಗಿನ ಜನರ ಬದುಕು ಹಸನಾಗಬೇಕು, ಏಳಿಗೆ ಹೊಂದಬೇಕು. ಅದಕ್ಕಾಗಿ ನಮಗೆ ಈಗ ಪಲ್ಲವರ ಸ್ನೇಹ ಅಗತ್ಯ. ಪಲ್ಲವರ ರಾಜಕುಮಾರ ನಂದಿವರ್ಮ ರಾಷ್ಟ್ರಕೂಟ ಮನೆತನದ ಅಳಿಯತನಕ್ಕೆ ಯೋಗ್ಯವೆನಿಸುತ್ತದೆ. ನಿನ್ನ ಸಮ್ಮತಿ ಬೇಕು" ಎಂದನು. ಮುಂದುವರೆದು "ನೀನು ಪಲ್ಲವರ ಸೊಸೆಯಾಗಿ ಹೋಗುತ್ತಿರುವುದು ನಿನ್ನೊಬ್ಬಳ ಸಂಸಾರ ಸುಖಕ್ಕಲ್ಲ. ಎರಡು ರಾಜ್ಯ ಮನೆತನಗಳ ಸ್ನೇಹಸಂಬಂಧಕ್ಕಾಗಿ ಮಾತ್ರವಲ್ಲ, ಎರಡೂ ರಾಜ್ಯಗಳ ಗಡಿಗಳ ನಡುವೆ ಬಹುಕಾಲದವರೆಗೆ ರಕ್ತಪಾತವನ್ನು ತಡೆಗಟ್ಟಬಲ್ಲ ಶಾಂತಿಧೂತಳಾಗಿ ನಿಲ್ಲಲು" ಎಂದನು. ಅದರಂತೆ ಪಲ್ಲವ ರಾಜಕುಮಾರ ನಂದಿವರ್ಮನ ಕೈಹಿಡಿದಳು. ರಾಷ್ಟ್ರಕೂಟರ ಗಡಿಗಳ ಚಿಂತೆ ಕಳೆಯಿತು. ಸಾಹಿತ್ಯಾಭಿವೃದ್ಧಿಗೆ ಮನಗೊಟ್ಟನು. ಕನ್ನಡದಲ್ಲಿ 'ಕವಿರಾಜಮಾರ್ಗ' ಅವರ ಲೇಖನಿಯ ಕೊಡುಗೆಯಾಗಿ ಹೊರಬಂದಿತು.

ಪ್ರಶ್ನೆಗಳು :

ಅ. ಮಂತ್ರಿ ಮತ್ತು ಸೇನಾಧ್ಯಕ್ಷರಿಬ್ಬರು ರಾಷ್ಟ್ರಕೂಟರ ಸಿಂಹಾಸನಕ್ಕೆ ಬಂದೊದಗಿದ ಆಪತ್ತನ್ನು ಹೇಗೆ ನಿಭಾಯಿಸಿದರು?

ಆ. ಪಲ್ಲವರೊಂದಿಗೆ ಅಳಿಯತನದ ಸಂಬಂಧ ಮಾಡಲು ಅಮೋಘವರ್ಷ ನಿರ್ಧರಿಸಿದ್ದೇಕೆ?

ಉತ್ತರ :

ಅ. ತಂದೆ ಗೋವಿಂದರಾಜ ನಿಧನರಾಗುವ ವೇಳೆಗೆ ಅಮೋಘವರ್ಷನಿಗೆ ಕೇವಲ ೧೩ ವರ್ಷ ವಯಸ್ಸಾಗಿತ್ತು. ಗೋವಿಂದರಾಜನಿಂದ ಸೋತು ಸುಣ್ಣವಾಗಿದ್ದ ಶತ್ರು ರಾಜರು ತಲೆ ಎತ್ತಿದ್ದರು. ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿ ಪಾತಾಳಮಲ್ಲ ಮತ್ತು ಸೇನಾಧ್ಯಕ್ಷ ಬಂಕೇಶ ರಾಷ್ಟ್ರಕೂಟರ ಅಮೋಘವರ್ಷನ ಹತ್ಯೆಗೆ ರೂಪಿಸಿದ ಸಂಚನ್ನು ವಿಫಲಗೊಳಿಸುವುದರ ಮೂಲಕ ಸಿಂಹಾಸನಕ್ಕೆ ಬಂದೊದಗಿದ ಆಪತ್ತನ್ನು ನಿಭಾಯಿಸಿದರು.

ಆ. ರಾಜರ ಜೀವನವೆಲ್ಲ ನೆರೆಹೊರೆಯ ರಾಜರೊಡನೆ ಯುದ್ಧ ಮಾಡುವುದರಲ್ಲಿ ರಾಜತ್ವ ಸಾರ್ಥಕವಾಗುವುದಿಲ್ಲ. ದೇಶದ ಜನರ ಬದುಕು ಹಸನಾಗ ಬೇಕಾದರೆ ಪಲ್ಲವರ ಸ್ನೇಹ ಅಗತ್ಯ. ತನ್ನ ಮಗಳು ಪಲ್ಲವರ ಸೊಸೆಯಾದರೆ ಎರೆಡು ಮನೆತನಗಳ ಸ್ನೇಹ ಸಂಬಂಧದೊಂದಿಗೆ ಎರಡು ಗಡಿಗಳಲ್ಲಿ ಆಗುವ ರಕ್ತಪಾತ ತಡೆಯಬಹುದು ಎಂದು ಪಲ್ಲವರೊಂದಿಗೆ ಅಳಿಯತನದ ಸಂಬಂಧ ಮಾಡಲು ರಾಜ ಅಮೋಘವರ್ಷ ನಿರ್ಧರಿಸಿದನು.

XIV. ಪತ್ರಲೇಖನ ಬರೆಯುವುದು : **1 X 5 = 5**

44. ನಿಮ್ಮನ್ನು ಹಾವೇರಿ ತಾಲೂಕಿನ ಅಕ್ಕೂರು ಗ್ರಾಮದ ನಿವಾಸಿ 'ಅಪೇಕ್ಷಾ' ಎಂದು ಭಾವಿಸಿಕೊಂಡು, ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವವನ್ನು ಬಗೆಹರಿಸುವಂತೆ ಕೋರಿ ಗ್ರಾಮಪಂಚಾಯತಿಯ ಅಭಿವೃದ್ಧಿ ಅಧಿಕಾರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಬಸವರಾಜ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ 80ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ವಿವರಿಸಿ, ಧಾರವಾಡದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ಗಜಾನನ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.

ಉತ್ತರ :

ದಿನಾಂಕ : ೧೨.೦೮.೨೦೨೬

ಸ್ಥಳ : ಅಕ್ಕೂರು

ಇವರಿಂದ,
ಅಪೇಕ್ಷಾ
ಅಕ್ಕೂರು ಗ್ರಾಮ
ಹಾವೇರಿ

ಇವರಿಗೆ,
ಮಾನ್ಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು
ಅಕ್ಕೂರು ಗ್ರಾಮಪಂಚಾಯತಿ
ಹಾವೇರಿ

ಮಾನ್ಯರೆ,

ವಿಷಯ : <u>ಕುಡಿಯುವ ನೀರಿನ ಅಭಾವವನ್ನು ಬಗೆಹರಿಸುವಂತೆ ಕೋರಿ.</u>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾವೇರಿ ತಾಲೂಕಿನ ಅಕ್ಕೂರು ಗ್ರಾಮದಲ್ಲಿ ವಾಸಿಸುವ 'ಅಪೇಕ್ಷಾ' ಎಂಬ ಹೆಸರಿನ ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ವಿನಂತಿಸುವುದೇನೆಂದರೆ, ನಮ್ಮ ಗ್ರಾಮದ ನಿವಾಸಿಗಳು ಕುಡಿಯುವ ನೀರಿನ ಅಭಾವವನ್ನು ಎದುರಿಸುತ್ತಿದ್ದಾರೆ. ಗ್ರಾಮದಲ್ಲಿ ನೀರು ಪೂರೈಕೆ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿದೆ. ವಾರಕ್ಕೆ ಒಮ್ಮೆ ಮಾತ್ರ ನೀರು ಬರುತ್ತಿದ್ದು, ಅದು ಕೇವಲ ಅರ್ಧ ಗಂಟೆ ಮಾತ್ರ ಇರುತ್ತದೆ. ಇದರಿಂದಾಗಿ ಶಾಲಾಮಕ್ಕಳು, ವೃದ್ಧರು ಹಾಗೂ ಗೃಹಿಣಿಯರು ಕುಡಿಯುವ ನೀರಿಗಾಗಿ ಪ್ರತಿದಿನ ಮೈಲುಗಟ್ಟಲೆ ನಡೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ದಿನನಿತ್ಯದ ಕೆಲಸಗಳಿಗೂ ನೀರಿಲ್ಲದೆ ಜನರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಖಾಸಗಿ ನೀರಿಗಾಗಿ ಹಣ ವ್ಯಯಿಸುತ್ತಿರುವುದು ಬಡಜನರಿಗೆ ಕಷ್ಟವಾಗಿದೆ. ಆದ್ದರಿಂದ ದಯವಿಟ್ಟು ನಮ್ಮ ಗ್ರಾಮಕ್ಕೆ ನಿಯಮಿತವಾಗಿ ಕುಡಿಯುವ ನೀರು ಪೂರೈಸಲು ಕ್ರಮ ಕೈಗೊಳ್ಳಬೇಕು. ಸಮಸ್ಯೆ ಬಗೆಹರಿಯುವವರೆಗೆ ಪರ್ಯಾಯ ವ್ಯವಸ್ಥೆಯಾಗಿ ಸರ್ಕಾರದ ವತಿಯಿಂದ ನೀರಿನ ಟ್ಯಾಂಕರ್ ವ್ಯವಸ್ಥೆ ಮಾಡಿಕೊಡಬೇಕೆಂದು

ಸಮಸ್ತ ಗ್ರಾಮದ ನಿವಾಸಿಗಳ ಪರವಾಗಿ ವಿನಂತಿಸುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ
ಅಪೇಕ್ಷಾ
(ಗ್ರಾಮದ ಪ್ರಮುಖರ ಸಹಿಗಳಿವೆ)

ಹೊರವಿಳಾಸ :

ಇವರಿಗೆ, ಮಾನ್ಯ ಅಭಿವೃದ್ಧಿ ಅಧಿಕಾರಿಗಳು ಅಕ್ಕೂರು ಗ್ರಾಮಪಂಚಾಯತಿ ಹಾವೇರಿ	ಇವರಿಂದ, ಅಪೇಕ್ಷಾ ಅಕ್ಕೂರು ಗ್ರಾಮ ಹಾವೇರಿ

ಅಥವಾ

ಉತ್ತರ : ಕ್ಷೇಮ ಶ್ರೀ

ಇವರಿಂದ,
ಬಸವರಾಜ
ಸರ್ಕಾರಿ ಪ್ರೌಢಶಾಲೆ
೧೦ ನೆಯ ತರಗತಿ
ಹಾಸನ
ದಿನಾಂಕ : ೧೬.೦೮.೨೦೨೬

ಪ್ರೀತಿಯ,

ಗೆಳೆಯನಾದ ಗಜಾನನನಿಗೆ ನಿನ್ನ ಗೆಳೆಯ ಬಸವರಾಜ ಮಾಡುವ ವಂದನೆಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ. ನೀನು ಅಲ್ಲಿ ಕ್ಷೇಮವಾಗಿರುವೆ ಎಂದು ನಂಬಿರುತ್ತೇನೆ.

ನನ್ನ ವಿದ್ಯಾಭ್ಯಾಸ ಇಲ್ಲಿ ಚೆನ್ನಾಗಿ ನಡೆಯುತ್ತಿದೆ. ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಲು ವೇಳಾಪಟ್ಟಿ ತಯಾರಿಸಿಕೊಂಡು ಓದುತ್ತಿದ್ದೇನೆ. ಈ ಪತ್ರ ಬರೆದ ಕಾರಣವೇನೆಂದರೆ, ಶಾಲೆಯಲ್ಲಿ ದಿನಾಂಕ ೧೫.೦೮.೨೦೨೬ ರಂದು ೮೦ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಿತು. ಕಾರ್ಯಕ್ರಮಕ್ಕೆ ಪಾಲಕರೆಲ್ಲರೂ ಆಗಮಿಸಿದ್ದರು. ಧ್ವಜಾರೋಹಣ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರು ತಮ್ಮ ಭಾಷಣದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಮೊದಲು ಭಾರತದ ಸ್ಥಿತಿ, ಪ್ರಮುಖ ಹೋರಾಟಗಾರರ ತ್ಯಾಗ, ಮುಂಬರುವ ದಿನಗಳಲ್ಲಿ ನಮ್ಮೆಲ್ಲರ ಕರ್ತವ್ಯದ ಬಗ್ಗೆ ಅತ್ಯುಪಯುಕ್ತ ಮಾಹಿತಿ ನೀಡಿದರು. ನಂತರ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಅವರು ಬಹುಮಾನ ನೀಡಿದರು. ನಾನು ಕೂಡ ದೇಶಭಕ್ತಿ ಹೊಮ್ಮಿಸುವ ಭಾಷಣ ಸ್ಪರ್ಧೆಯಲ್ಲಿ ಬಹುಮಾನ ಪಡೆದೆನು. ಸಭಾ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ವೇದಿಕೆಯಲ್ಲಿ ನಡೆದವು. ನೃತ್ಯದಲ್ಲೂ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ನಮ್ಮ ನೃತ್ಯಕ್ಕೆ ಅತಿಥಿಗಳು ಮತ್ತು ಪಾಲಕರು ಬಹಳ ಮೆಚ್ಚುಗೆ ವ್ಯಕ್ತಪಡಿಸಿದರು. ಒಟ್ಟಾರೆ ಶಾಲೆಯ ಈ ಸುದಿನ ಎಂದೂ ಮರೆಯದ ಅನುಭವಗಳನ್ನು, ನೆನಪುಗಳನ್ನು ನನ್ನ ಜೀವನದಲ್ಲಿ ನೀಡಿತು. ನಿನ್ನ ಶಾಲೆಯ ೮೦ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ಕುರಿತು ಪತ್ರವನ್ನು ಬರೆ.

ಮನೆಯಲ್ಲಿ ನಿನ್ನ ತಂದೆ, ತಾಯಿಯವರಿಗೂ ನನ್ನ ನಮಸ್ಕಾರಗಳನ್ನು ತಿಳಿಸು.

ಇಂತಿ ನಿನ್ನ ಪ್ರೀತಿಯ ಗೆಳೆಯ
ಬಸವರಾಜ

ಹೊರ ವಿಳಾಸ :

ಇವರಿಗೆ, ಗಜಾನನ ೧೦ನೇ ತರಗತಿ ಸರ್ಕಾರಿ ಪ್ರೌಢಶಾಲೆ ಧಾರವಾಡ	ಇವರಿಂದ, ಬಸವರಾಜ ೧೦ನೇ ತರಗತಿ ಸರ್ಕಾರಿ ಪ್ರೌಢಶಾಲೆ ಹಾಸನ

XV. ಪ್ರಬಂಧ ಬರೆವಣಿಗೆ :

45. ಗ್ರಂಥಾಲಯಗಳ ಮಹತ್ತ್ವ.

ಅಥವಾ

ಕೃತಕ ಬುದ್ಧಿಮತ್ತೆ (ಎ.ಐ.) ಮತ್ತು ಉದ್ಯೋಗಾವಕಾಶಗಳು.

ಉತ್ತರ : ಗ್ರಂಥಾಲಯಗಳ ಮಹತ್ತ್ವ :

ಪೀಠಿಕೆ : 'ದೇಶ ಸುತ್ತು ಕೋಶ ಓದು' ಎಂಬಂತೆ ಜ್ಞಾನ ಸಂಪಾದನೆಯ ಎರಡು ಸೆಲೆಗಳೆಂದರೆ ಒಂದು ಪ್ರವಾಸ ಮತ್ತೊಂದು ಗ್ರಂಥ. ಗ್ರಂಥಗಳ ಸುವ್ಯವಸ್ಥಿತ ಕೇಂದ್ರವೇ ಗ್ರಂಥಾಲಯ. ಗ್ರಂಥಗಳ ಅಧ್ಯಯನಕ್ಕೆ ಅವಕಾಶವಿರುವುದರಿಂದ ಇದು ವಾಚನಾಲಯ. 'ಗ್ರಂಥಗಳಿಲ್ಲದ ಮನೆ ಆತ್ಮವಿಲ್ಲದ ದೇಹದಂತೆ ಗ್ರಂಥಾಲಯವಿಲ್ಲದ ಊರು ದೇವರಿಲ್ಲದ ದೇವಾಲಯದಂತೆ' ಗ್ರಂಥಾಲಯಗಳು ಜ್ಞಾನದ ಹಸಿವನ್ನು ನೀಗಿಸುವ ದಾಸೋಹ ಕೇಂದ್ರಗಳು. ದೇಹಕ್ಕೆ ಆಹಾರವಿದ್ದಂತೆ ಮನಕ್ಕೆ ಗ್ರಂಥಗಳಿವೆ. ವಾಚನಾಲಯಗಳು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಜ್ಞಾನ ಹಂಚುವ ಸಂಪರ್ಕ ಸಾಧನಗಳು.

ವಿಷಯ ನಿರೂಪಣೆ : ಗ್ರಂಥಗಳನ್ನು ಓದಲು ಅಥವಾ ಎರವಲು ಪಡೆಯಲು ವ್ಯವಸ್ಥಿತವಾಗಿ ಇಟ್ಟಿರುವ ಕೋಣೆ ಅಥವಾ ಕಟ್ಟಡವೇ ಗ್ರಂಥಾಲಯ. ದಿನ ಪತ್ರಿಕೆಗಳು, ವಾರ–ಮಾಸ ಪತ್ರಿಕೆಗಳು, ಭಾಷೆ–ವಿಜ್ಞಾನ–ಇತಿಹಾಸ–ಪುರಾಣ–ತಂತ್ರಜ್ಞಾನ ಹೀಗೆ ಪ್ರಾಚೀನ, ಆಧುನಿಕ ಎಲ್ಲಾ ಗ್ರಂಥಗಳು ಲಭ್ಯವಿರುವ ತಾಣವಾಗಿದೆ. ಪ್ರಾಚೀನ ಕಾಲದಲ್ಲಿ ಗ್ರಂಥಾಲಯ ಪರಂಪರೆಯನ್ನು ಭಾರತದ ನಳಂದಾ ಮತ್ತು ತಕ್ಷಶಿಲಾ ವಿಶ್ವವಿದ್ಯಾಲಯದಲ್ಲಿ ಕಾಣುತ್ತೇವೆ. ಅರಸರೇ ಆಶ್ರಯದಾತರಾಗಿದ್ದರು. ಭಾರತ ಸ್ವಾತಂತ್ರ್ಯ ನಂತರ ಸರ್ಕಾರದ ಪೋಷಣೆಯಲ್ಲಿ ಗ್ರಂಥಾಲಯಗಳು ಅಭಿವೃದ್ಧಿಗೊಂಡವು. ಸಾರ್ವಜನಿಕ ಗ್ರಂಥಾಲಯ, ಶಾಲಾ ಕಾಲೇಜುಗಳ ಗ್ರಂಥಾಲಯ, ಖಾಸಗಿ ಸಂಸ್ಥೆಗಳ ಗ್ರಂಥಾಲಯ ಹೀಗೆ ವಿವಿಧ ಪ್ರಕಾರದ ಗ್ರಂಥಾಲಯಗಳು ಸೇವೆಯಲ್ಲಿವೆ. ಗ್ರಂಥಾಲಯಗಳು ಜ್ಞಾನ ಬಯಸುವ ಜನರಿಗೆ ದಾಹ ನೀಗಿಸುವ ಅಮೃತವಾಗಿವೆ. ವಿಶೇಷವಾಗಿ ವಿದ್ಯಾರ್ಥಿಗಳಿಗೆ ಸಂಜೀವಿನಿಯಂತಿವೆ. ಎಲ್ಲರೂ ಗ್ರಂಥಗಳನ್ನು ಖರೀದಿಸಿ ಓದಲಾಗದು ಅದರಲ್ಲೂ ಬಡವರಿಗಂತೂ ಕನಸಿನ ಮಾತು. ಇವರಿಗೆಲ್ಲ ಗ್ರಂಥಾಲಯಗಳು ವರದಾನವಾಗಿವೆ. ಗ್ರಂಥಾಲಯದಿಂದ ಓದುಗರಿಗೆ ಲಾಭವಾಗುವಂತೆ ಗ್ರಂಥ ರಚನಾಕಾರರಿಗೂ ಪ್ರಕಾಶಕರಿಗೂ ಪ್ರೋತ್ಸಾಹ ನೀಡುತ್ತದೆ. ಗ್ರಾಮ ಪಂಚಾಯಿತಿಯಿಂದ ರಾಜಧಾನಿವರೆಗೂ ಗ್ರಂಥಾಲಯಗಳು ಸ್ಥಾಪನೆಗೊಂಡಿವೆ. ಭಾರತದ ಗ್ರಂಥಾಲಯ ಪಿತಾಮಹ ಡಾ॥ ಎಸ್. ಆರ್. ರಂಗನಾಥನ್ ಇವರು ಗ್ರಂಥಾಲಯಗಳ ವ್ಯವಸ್ಥಿತವಾದ ಅಭಿವೃದ್ಧಿಗೆ ಕಾರಣಕರ್ತರು. ಇಂದು ಗ್ರಂಥಾಲಯಗಳು ಆಧುನಿಕ ಜನರಿಗೆ ಅನುಕೂಲವಾಗುವಂತೆ ಡಿಜಿಟಲ್ ಹೈಟೆಕ್ ಇ–ಗ್ರಂಥಾಲಯ ಆಗುತ್ತಿವೆ. ವಾಚನಾಲಯದಲ್ಲಿ ಮೌನತೆ ಕಾಪಾಡಬೇಕು. ಪತ್ರಿಕೆ, ಪುಸ್ತಕಗಳು ಹಾಳಾಗದಂತೆ ನೋಡಿಕೊಳ್ಳಬೇಕು. ಎರವಲು ಪಡೆದ ಗ್ರಂಥಗಳನ್ನು ಸರಿಯಾದ ಸಮಯಕ್ಕೆ ಹಿಂದಿರುಗಿಸಬೇಕು. ಗ್ರಂಥಾಲಯದ ಅಭಿರುಚಿ ಬೆಳೆಸಿಕೊಂಡು, ಇತರರಲ್ಲೂ ಅಸಕ್ತಿ ಮೂಡಲು ಪ್ರೇರೇಪಿಸುತ್ತಿರಬೇಕು.

ಉಪಸಂಹಾರ : ಪುಸ್ತಕಗಳೇ ಮಾನವನ ನಿಜವಾದ ಮಿತ್ರರು. ಮೌಲ್ಯಯುತ ಬದುಕಿಗೆ ವೈಜ್ಞಾನಿಕ ಅಭಿವೃದ್ಧಿಗೆ ಗ್ರಂಥಾಲಯಗಳ ಪಾತ್ರ ಹಿರಿದು. ಇದರ ಸದುಪಯೋಗವನ್ನು ಎಲ್ಲರೂ ಪಡೆಯಬೇಕು. ಆದರೆ ಯಾಂತ್ರಿಕ ಬದುಕು ಮತ್ತು ಮೊಬೈಲ್ ಟಿ. ವಿ. ಪ್ರಭಾವದಿಂದ ಗ್ರಂಥಾಲಯಗಳ ಸಹವಾಸ ಕಡಿಮೆಯಾಗುತ್ತಿರುವುದು ವಿಷಾದನೀಯ. ಒಟ್ಟಾರೆ ಗ್ರಂಥಾಲಯ ಹೆಚ್ಚು ಜನರಿಗೆ ಉಪಯೋಗವಾಗಬೇಕು ಎಂಬುದು ನನ್ನ ಬಯಕೆಯಾಗಿದೆ.

"ಗ್ರಂಥಾಲಯವೇ ಮಂದಿರ. ಗ್ರಂಥಗಳೇ ದೇವರು. ಗ್ರಂಥಕರ್ತರೇ ಅರ್ಚಕರು. ಓದುಗರೇ ಭಕ್ತರು"

ಅಥವಾ

ಉತ್ತರ : ಕೃತಕ ಬುದ್ಧಿಮತ್ತೆ (ಎ.ಐ.) ಮತ್ತು ಉದ್ಯೋಗಾವಕಾಶಗಳು :

ಪೀಠಿಕೆ : ಇಪ್ಪತ್ತೊಂದನೇ ಶತಮಾನದ ಅತ್ಯಂತ ಕ್ರಾಂತಿಕಾರಿ ತಂತ್ರಜ್ಞಾನವೆಂದರೆ ಕೃತಕ ಬುದ್ಧಿಮತ್ತೆ (Artificial Intelligence - AI). ಮಾನವನ ಬುದ್ಧಿಶಕ್ತಿ, ಆಲೋಚನಾ ಸಾಮರ್ಥ್ಯ ಮತ್ತು ನಿರ್ಧಾರ ಕೈಗೊಳ್ಳುವ ಗುಣಗಳನ್ನು ಕಂಪ್ಯೂಟರ್ ಅಥವಾ ಯಂತ್ರಗಳಿಗೆ ಅಳವಡಿಸುವುದೇ ಕೃತಕ ಬುದ್ಧಿಮತ್ತೆಯಾಗಿದೆ. ಇಂದು ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನವು ವೇಗವಾಗಿ ಬೆಳೆಯುತ್ತಿದ್ದು, ಉದ್ಯೋಗ ಮಾರುಕಟ್ಟೆಯಲ್ಲಿ ಭಾರಿ ಬದಲಾವಣೆಗಳನ್ನು ತರುತ್ತಿದೆ. ಒಂದು ಕಡೆ ಎ.ಐ. ತಂತ್ರಜ್ಞಾನದಿಂದಾಗಿ ಉದ್ಯೋಗಗಳು ನಶಿಸಿಹೋಗುತ್ತವೆ ಎಂಬ ಆತಂಕವಿದ್ದರೆ, ಮತ್ತೊಂದು ಕಡೆ ಇದು ಲಕ್ಷಾಂತರ ಹೊಸ ಮತ್ತು ಸೃಜನಶೀಲ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿದೆ.

ವಿಷಯ ನಿರೂಪಣೆ :

ಉದ್ಯೋಗ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳು : ಕೃತಕ ಬುದ್ಧಿಮತ್ತೆಯು ಕೈಗಾರಿಕೆಗಳು, ಬ್ಯಾಂಕಿಂಗ್, ಆರೋಗ್ಯ, ಶಿಕ್ಷಣ ಮತ್ತು ಸೇವಾ ವಲಯಗಳಲ್ಲಿ ಕೆಲಸದ ಸ್ವರೂಪವನ್ನೇ ಬದಲಾಯಿಸಿದೆ. ಈ ಹಿಂದೆ ಮಾನವರು ದಿನಗಟ್ಟಲೆ ಮಾಡುತ್ತಿದ್ದ ಸಂಕೀರ್ಣ ಕೆಲಸಗಳನ್ನು ಇಂದು ಎ.ಐ. ಸೆಕೆಂಡುಗಳಲ್ಲಿ ನಿಖರವಾಗಿ ಮಾಡುತ್ತಿದೆ. ಇದರಿಂದಾಗಿ ಉತ್ಪಾದಕತೆ ಹೆಚ್ಚಾಗಿದೆಯಾದರೂ, ಸಾಂಪ್ರದಾಯಿಕ ಉದ್ಯೋಗಗಳ ಸ್ವರೂಪ ಬದಲಾಗುತ್ತಿದೆ. ಕೃತಕ ಬುದ್ಧಿಮತ್ತೆಯು ಮಾನವನಿಗೆ ಪರ್ಯಾಯವಲ್ಲ, ಬದಲಿಗೆ ಮಾನವನ ದಕ್ಷತೆಯನ್ನು ಹೆಚ್ಚಿಸುವ ಒಂದು ಪ್ರಬಲ ಸಾಧನವಾಗಿದೆ.

ಎ.ಐ. ನಿಂದ ಸೃಷ್ಟಿಯಾಗುತ್ತಿರುವ ಹೊಸ ಉದ್ಯೋಗಾವಕಾಶಗಳು : ತಂತ್ರಜ್ಞಾನದ ಬೆಳೆವಣಿಗೆಯು ಹಳೆಯ ಉದ್ಯೋಗಗಳನ್ನು ನುಂಗಿ ಹಾಕಿದರೂ, ಅದಕ್ಕಿಂತ ಹೆಚ್ಚಿನ ಪ್ರಮಾಣದ ಆಧುನಿಕ ಉದ್ಯೋಗಗಳನ್ನು ಸೃಷ್ಟಿಸುತ್ತಿದೆ.

1. ದತ್ತಾಂಶ ವಿಶ್ಲೇಷಕರು (Data Scientist and Analyst) : ಇಂದು ದತ್ತಾಂಶವೇ (Data) ದೊಡ್ಡ ಆಸ್ತಿ. ಬೃಹತ್ ಪ್ರಮಾಣದ ಜಾಗತಿಕ ದತ್ತಾಂಶವನ್ನು ವಿಶ್ಲೇಷಿಸಿ, ಕಂಪನಿಗಳ ಬೆಳವಣಿಗೆಗೆ ಯೋಜನೆ ರೂಪಿಸುವ ತಜ್ಞರಿಗೆ ಭಾರಿ ಬೇಡಿಕೆಯಿದೆ.

2. ಎ.ಐ. ಮತ್ತು ಯಂತ್ರ ಕಲಿಕಾ ಇಂಜಿನಿಯರ್ಸ್ (AI and Machine learning Engineers) : ಹೊಸ ಎ.ಐ. ಮಾದರಿಗಳನ್ನು, ಸಾಫ್ಟ್‌ವೇರ್‌ಗಳನ್ನು ಮತ್ತು ಕ್ರಮಾವಳಿಗಳನ್ನು (Algorithms) ವಿನ್ಯಾಸಗೊಳಿಸುವ ತಾಂತ್ರಿಕ ಪರಿಣಿತರ ಅಗತ್ಯತೆ ದಿನೇ ದಿನೇ ಹೆಚ್ಚುತ್ತಿದೆ.

3. ಸೈಬರ್ ಸೆಕ್ಯೂರಿಟಿ ತಜ್ಞರು : ಡಿಜಿಟಲೀಕರಣ ಹೆಚ್ಚಾದಂತೆ ಆನ್‌ಲೈನ್ ವಂಚನೆ ಮತ್ತು ಡೇಟಾ ಕಳ್ಳತನದ ಭೀತಿಯೂ ಹೆಚ್ಚಾಗಿದೆ. ಇದನ್ನು ತಡೆಯಲು ಸೈಬರ್ ಭದ್ರತಾ ವಲಯದಲ್ಲಿ ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗುತ್ತಿವೆ.

4. ಪ್ರಾಂಪ್ಟ್ ಇಂಜಿನಿಯರಿಂಗ್ (Prompt Engineering) : ChatGPT ನಂತಹ AI ಪರಿಕರಗಳಿಂದ ನಿಖರವಾದ ಕೆಲಸ ಅಥವಾ ಉತ್ತರವನ್ನು ಪಡೆಯಲು ಸೂಕ್ತವಾದ ಸೂಚನೆಗಳನ್ನು (Prompts) ನೀಡುವ ಹೊಸ ಕೌಶಲ್ಯ ಆಧಾರಿತ ಉದ್ಯೋಗಗಳು ಸೃಷ್ಟಿಯಾಗಿವೆ.

5. ಆರೋಗ್ಯ ಮತ್ತು ರೊಬೊಟಿಕ್ಸ್ ಕ್ಷೇತ್ರ : ವೈದ್ಯಕೀಯ ರಂಗದಲ್ಲಿ ರೋಗಗಳನ್ನು ಮೊದಲೇ ಪತ್ತೆಹಚ್ಚಲು ಮತ್ತು ಶಸ್ತ್ರಚಿಕಿತ್ಸೆಗಳಿಗೆ ಸಹಾಯ ಮಾಡುವ ರೊಬೊಟಿಕ್ ತಂತ್ರಜ್ಞರನ್ನು ನಿರ್ವಹಿಸಲು ಹೊಸ ಉದ್ಯೋಗಿಗಳು ಬೇಕಾಗಿದ್ದಾರೆ.

ಉದ್ಯೋಗ ನಷ್ಟದ ಆತಂಕ ಮತ್ತು ಸವಾಲುಗಳು : ಕೃತಕ ಬುದ್ಧಿಮತ್ತೆಯು ಕೆಲವು ನಿರ್ದಿಷ್ಟ ವಲಯಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿರುವುದು ಸುಳ್ಳಲ್ಲ. ಪುನರಾವರ್ತಿತ ಮತ್ತು ದೈಹಿಕ ಶ್ರಮದ ಕೆಲಸಗಳಾದ ಮಾಹಿತಿ ನಮೂದು (Data Entry), ಗ್ರಾಹಕ ಸೇವಾ ದೂರವಾಣಿ ನಿರ್ವಾಹಕ (Custemer Care Telephone Operators), ಕಾರ್ಖಾನೆ ಜೋಡಣಾ ಮಾರ್ಗ(Factory Assembly Line) ಕೆಲಸಗಳು ಮತ್ತು ಮೂಲ ಮಟ್ಟದ ಸಂಕೇತೀಕರಣ (Coding) ಕೆಲಸಗಳನ್ನು ಎ.ಐ. ಸುಲಭವಾಗಿ ಸ್ವಯಂಚಾಲಿತಗೊಳಿಸುತ್ತಿದೆ. ಇದರಿಂದಾಗಿ ತಂತ್ರಜ್ಞಾನಕ್ಕೆ ತಕ್ಕಂತೆ ಅಪ್‌ಡೇಟ್ ಆಗದ ಉದ್ಯೋಗಿಗಳು ಕೆಲಸ ಕಳೆದುಕೊಳ್ಳುವ ಅಪಾಯದಲ್ಲಿದ್ದಾರೆ.

ಎ.ಐ. ಯುಗದಲ್ಲಿ ಉದ್ಯೋಗ ಮಾರುಕಟ್ಟೆಯಲ್ಲಿ ಇರಬೇಕಾದರೆ ನಿರಂತರ ಕಲಿಕೆ ಅತ್ಯಗತ್ಯ. ತಂತ್ರಜ್ಞಾನವು ಕೇವಲ ತಾಂತ್ರಿಕ ಕೌಶಲ್ಯಗಳನ್ನು ಮಾತ್ರವಲ್ಲದೆ, ಮಾನವೀಯ ಗುಣಗಳಾದ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ, ಭಾವನಾತ್ಮಕ ಬುದ್ಧಿವಂತಿಕೆ ಮತ್ತು ನಾಯಕತ್ವದ ಗುಣಗಳನ್ನು ಅಪೇಕ್ಷಿಸುತ್ತದೆ. ಏಕೆಂದರೆ ಈ ಗುಣಗಳನ್ನು ಯಂತ್ರಗಳು ಎಂದಿಗೂ ನಕಲು ಮಾಡಲು ಸಾಧ್ಯವಿಲ್ಲ. ತಂತ್ರಜ್ಞಾನವನ್ನು ಬಳಸಿಕೊಂಡು ಹೇಗೆ ಕೆಲಸ ಮಾಡಬೇಕೆಂಬುದನ್ನು ಕಲಿಯುವುದು ಇಂದಿನ ಯುವ ಪೀಳಿಗೆಯ ಕರ್ತವ್ಯವಾಗಿದೆ.

ಉಪಸಂಹಾರ : ಒಟ್ಟಾರೆಯಾಗಿ ಹೇಳುವುದಾದರೆ, ಕೃತಕ ಬುದ್ಧಿಮತ್ತೆಯು ಮಾನವಕುಲಕ್ಕೆ ದೊರೆತಿರುವ ಒಂದು ವರವಾಗಿದೆ. ಇದು ಉದ್ಯೋಗಗಳನ್ನು ನಾಶಮಾಡುವುದಿಲ್ಲ, ಬದಲಿಗೆ ಅವುಗಳ ಸ್ವರೂಪವನ್ನು ಮರುರೂಪಿಸುತ್ತದೆ. ಭವಿಷ್ಯದಲ್ಲಿ "ಎ.ಐ. ಮಾನವರನ್ನು ಉದ್ಯೋಗದಿಂದ ತೆಗೆದುಹಾಕುವುದಿಲ್ಲ, ಬದಲಿಗೆ ಎ.ಐ. ಬಳಸುವ ಮಾನವರು, ಎ.ಐ. ಬಳಸದ ಮಾನವರ ಉದ್ಯೋಗವನ್ನು ಪಡೆದುಕೊಳ್ಳುತ್ತಾರೆ". ಆದ್ದರಿಂದ, ತಂತ್ರಜ್ಞಾನಕ್ಕೆ ಹೆದರದೆ ಹೊಸ ಕೌಶಲ್ಯಗಳನ್ನು ರೂಢಿಸಿಕೊಂಡರೆ ಭವಿಷ್ಯದಲ್ಲಿ ಅಪಾರ ಉದ್ಯೋಗಾವಕಾಶಗಳನ್ನು ಪಡೆದು ದೇಶದ ಆರ್ಥಿಕತೆಗೆ ಕೊಡುಗೆ ನೀಡಬಹುದು.